ಸಂಪುಟ: 01 ಸಂಚಿಕೆ: 10 ಪುಟ: 04 ಬೆಲೆ: 02 ಭಾನುವಾರ ಜೂನ್ 14 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:10 Pages:04 Price:02 SUNDAY JUNE 14 2026 RNI NO: KNKAN/26/A4008 E-mail:ajathashathru2026@gmail.com

## ವಕೀಲರ ಮತ್ತು ಪಿಡಿಓ ನಡುವೆ ಅವಾಚ್ಯ ಶಬ್ದಗಳ ವಾಕ್ಸಮರ

**ಪಂಚಾಯತ್ ರಾಜ್ ಕಾರ್ಯದರ್ಶಿಗೆ ದೂರು**

**ಕಾರಟಗಿ: ತಾಲೂಕಿನ ಯರಡೋಣ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳಾದ ಶಿವರಾಜ್ ಇವರು ಗಂಗಾವತಿಯ ವಕೀಲರಾದ ಮಲ್ಲೇಶಪ್ಪ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಘಟನೆ ಬಹಿರಂಗಗೊಂಡಿದೆ.**

ಮಲ್ಲೇಶಪ್ಪ ವಕೀಲರು ಕಾನೂನು ಪದವಿ ವಿಧ್ಯಾಭ್ಯಾಸದ ವ್ಯಕ್ತಿಯೋರ್ವ-ರಿಗೆ ಪುಸ್ತಕ ಖರೀದಿಗೆ ಗ್ರಾಮ ಪಂಚಾಯಿತಿಯಿಂದ ಕೊಡುವ ಸಹಾಯ ಧನ ಬಿಡುಗಡೆ ಮಾಡುವಂತೆ ಮೊಬೈಲ್ ಕರೆ ಮೂಲಕ ವಿನಂತಿಸಿಕೊಂಡಾಗ ಪಿಡಿಓ ಅವರು ಸರಿಯಾದ ಉತ್ತರ ನೀಡಿರುವುದಿಲ್ಲ. ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಹಾಗೂ ಇಬ್ಬರೂ ಪರಸ್ಪರ ಬೈದಾಡಿಕೊಂಡಿದ್ದಾರೆ. ಈ ಕುರಿತು ವಕೀಲರಾದ ಮಲ್ಲೇಶಪ್ಪ ಅವರು ಮುಖ್ಯ ಕಾರ್ಯದರ್ಶಿಗಳು ಪಂಚಾಯತ್ ರಾಜ್ ಇಲಾಖೆ.

ಪ್ರಾದೇಶಿಕ ಆಯುಕ್ತರು ಕಲಬುರ್ಗಿ. ಜಿಲ್ಲಾಧಿಕಾ-ರಿಗಳ ಕೊಪ್ಪಳ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೊಪ್ಪಳ. ತಾಲೂಕ ಪಂಚಾಯಿತಿ ಕಾರಟಗಿ ಇವರುಗಳಿಗೆ ದೂರು ನೀಡಿದ್ದಾರೆ. ಸಾರ್ವಜನಿಕ ಸೇವೆಯಲ್ಲಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಾರ್ವಜನಿಕರ ಜೊತೆ ಮಾತನಾಡುವಾಗ ನಾನೊಬ್ಬ ಸರ್ಕಾರಿ ನೌಕರ ಎನ್ನುವುದನ್ನು ಮರೆತು ಅವಾಚ್ಯ ಶಬ್ದಗಳಿಂದ ನಿಂದಿಸಿರುವ.

ಆಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಫುಲ್ ವೈರಲ್ ಆಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ತನೆಯನ್ನು ಸಾರ್ವಜನಿಕರು ಪ್ರಶ್ನಿಸುವಂತಾಗಿದೆ. ಪ್ರಧಾನ ಕಾರ್ಯದರ್ಶಿಗಳು ಪಂಚಾಯತ್ ರಾಜ್ ಇಲಾಖೆ ಇವರಿಗೆ ವಕೀಲರಾದ ಮಲ್ಲೇಶಪ್ಪ ಅವರು ದೂರು ನೀಡಿದ್ದು, ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಭರವಸೆ ಇದೆ ಎಂದು ವಕೀಲರು ಹೇಳಿದ್ದಾರೆ.

**ಅಜಾತ ಶತ್ರು**
**ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# ಭಾರತೀಯ ನಾವಿಕರ ಹತ್ಯೆ :ಅಮೆರಿಕ ಧೋರಣೆ ಬಗ್ಗೆ ರೂಬಿಯೋ ಜೊತೆ ಜೈಶಂಕರ್ ಮಾತುಕತೆ

**ನವದೆಹಲಿ: ಓಮನ್ ಕೊಲ್ಲಿಯಲ್ಲಿ ವ್ಯಾಪಾರಿ ಹಡಗಿನ ಮೇಲೆ ಅಮೆರಿಕದ ಮಿಲಿಟರಿ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಸಾವನ್ನಪ್ಪಿದ ವಿಷಯವನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ಇಂದು ಅಮೆ-ರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ಪ್ರಸ್ತಾಪಿಸಿದರು.**

ಪ್ರಸ್ತುತ ಯುರೋಪ್ ಭೇಟಿಯಲ್ಲಿರುವ ಜೈಶಂಕರ್ ಅವರು, ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು.ಇಂದು ಸಂಜೆ ಅಮೆ-ರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ಮಾತನಾಡಿದ್ದೇನೆ. ಮೂವರು ಭಾರತೀಯ ನಾವಿಕರು ಸಾವನ್ನಪ್ಪಿದ ಕೊಲ್ಲಿಯಲ್ಲಿ ಅಮೆರಿಕದ ನೌಕಾಪಡೆಯ ದಾಳಿಗೆ ಭಾರತದ ಬಲವಾದ ಪ್ರತಿಭಟನೆಯನ್ನು ನಾನು



ಪುನರುಚ್ಚರಿಸಿದ್ದೇನೆ ಎಂದು ವಿದೇಶಾಂಗ ಸಚಿವ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ವಾಣಿಜ್ಯ ಸಾಗಣೆಯ ವಿರುದ್ಧ ಇಂತಹ ಮಾರಕ ಕ್ರಮಗಳು ಸಮರ್ಥನೀಯವಲ್ಲ ಎಂದು ಅವರು ಹೇಳಿದರು.ಭಾರತವು ಶುಕ್ರವಾರ ಚಾರ್ಜ್ ಡಿ ಅಫೇರ್ಸ್ ಜೇಸನ್ ಮೀಕ್ಸ್ ಅವರನ್ನು ಕರೆಸಿ, ಓಮನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿ ಸದಸ್ಯರೊಂದಿಗೆ ವಾಣಿಜ್ಯ ಹಡಗುಗಳ ಮೇಲೆ ಅಮೆರಿಕದ ಮಿಲಿಟರಿಯ ಮಾರಕ ದಾಳಿಗಳು ಸ್ವೀಕಾರಾರ್ಹವಲ್ಲ ಎಂದು ಹೇಳಿದೆ. 24 ಭಾರತೀಯ ನಾವಿಕರನ್ನು ಹೊತ್ತೊಯ್ಯುತ್ತಿದ್ದ ಪಲಾವ್ ಧ್ವಜ ಹೊಂದಿರುವ ತೈಲ ಟ್ಯಾಂಕರ್ ಮಾರಿವೆಕ್?ಸ ಅನ್ನು ಜೂನ್ 8 ರಂದು ಯು-ಎಸ್ ಪಡೆಗಳು ನಿಷ್ಕ್ರಿಯಗೊಳಿಸಿದವು. ಎಲ್ಲಾ ಸಿಬ್ಬಂದಿಯನ್ನು ಸುರಕ್ಷಿತವಾಗಿ ರಕ್ಷಿಸಲಾಯಿತು.

ಜೂನ್ 10 ರಂದು, ಅಮೆರಿಕವು ಪಲಾವ್ ಧ್ವಜ ಹೊತ್ತ ಮತ್ತೊಂದು ಟ್ಯಾಂಕರ್ ಸೆಟ್ಟೆಬೆಲ್ಲೊ ಮೇಲೆ ದಾಳಿ ಮಾಡಿತು, ಅದರಲ್ಲಿದ್ದ 24 ಭಾರತೀಯ ನಾವಿಕರಲ್ಲಿ ಮೂವರು ಸಾವನ್ನಪ್ಪಿದರು.20 ಭಾರತೀಯರನ್ನು ಹೊತ್ತ ಗಿನಿಯಾ-ಬಿಸ್ಸೌ ಧ್ವಜ ಹೊತ್ತ ಟ್ಯಾಂಕರ್ ಜಲವೀರ್ ಎಂಬ ಮತ್ತೊಂದು ಹಡಗಿನ ಮೇಲೆ ಗುರುವಾರ ದಾಳಿ ನಡೆಸಲಾಗಿತ್ತು.

# ಬೇಡಿಕೆ ಈಡೇರಿಕೆಗೆ ಆಗ್ರಹಿಯಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ




ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಪಟ್ಟಣದ ಚನ್ನಮ್ಮ ವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಸರ್ಕಾರ ಕಳೆದ ಎರಡು ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ನಿರ್ಲಕ್ಷ್ಯ ಮಾಡುತ್ತಿದೆ ಎಂದು ಆರೋಪಿಸಿದ ಆಶಾ ಕಾರ್ಯಕರ್ತೆಯರು, ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.**

ಸರ್ಕಾರ ನೀಡುತ್ತಿರುವ ಹತ್ತು ಸಾವಿರ ರೂಪಾಯಿ ಗೌರವಧನದಲ್ಲಿ 900 ರೂಪಾಯಿಗಳನ್ನು ಕಡಿತಗೊಳಿಸಿರುವುದ-ರಿಂದ ಉಳಿದ ಸಂಬಳದಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು. ಪ್ರತಿಭಟನೆಯ ಸಂದರ್ಭದಲ್ಲಿ ಮನವಿ ಸ್ವೀಕ-ರಿಸಲು ಆರೋಗ್ಯ ಇಲಾಖೆಯ ಅಧಿಕಾ-ರಿಗಳು ಸುಮಾರು ಎರಡು ಗಂಟೆಗಳ ತಡವಾಗಿ ಆಗಮಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತೆಯರು ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಮುಖ್ಯ ಆಶಾ ಕಾರ್ಯಕರ್ತೆ ಶಂಕ್ರಮ್ಮ ಹಳ್ಳಿಕೇರಿ ಅವರು ಮಾತನಾಡಿ, ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಶೀಘ್ರವಾಗಿ ಈಡೇರಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ನಂತರ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತಮ್ಮ ಬೇಡಿಕೆಗಳ ಕು-ರಿತು ಮನವಿ ಪತ್ರ ಸಲ್ಲಿಸಲಾಯಿತು. ಈ ಪ್ರತಿಭಟನೆಯಲ್ಲಿ ತಿಪ್ಪಮ್ಮ, ಮಹಾದೇವಿ, ಸುನಂದಾ, ಶೋಭಾ, ಸಕ್ರವ್ವ, ರೇಖಾ, ನಾಗಮ್ಮ, ರಾಜೇಶ್ವರಿ, ಅನ್ನಪೂರ್ಣ, ಶಿವಮ್ಮ, ದೇವಕ್ಕ, ಲತಾ, ಗೀತಾ, ಅಕ್ಕಮಹಾದೇವಿ, ವಿಜಯಲಕ್ಷ್ಮಿ, ಶಶಿಕಲಾ, ಕರಿಯಮ್ಮ, ಅಲಿಮಾ, ಶಾಂತಮ್ಮ, ಶಕುಂತಲಾ ಸೇರಿದಂತೆ ನೂರಾರು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ಮಮತಾ ರಾಯರಡ್ಡಿಯಿಂದ ಎಸ್‌ಎಸ್‌ಎಲ್ಸಿ-ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಯಲಬುರ್ಗಾದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಇಂದು ಆರಾಮ್ ಪೌಂಡೇಷನ್ ವತಿಯಿಂದ 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಮಾಡುವ ಮೂಲಕ ನೆನಪಿನ ಕಾಣಿಕೆ ಕಿಟ್ ವಿತ-ರಿಸಿದರು.**



ಬಳಿಕ ಆರಾಮ್ ಫೌಂಡೇಶನ್ ಸಂಸ್ಥಾಪಕರಾದ ಮಮತಾ ರಾಯರಡ್ಡಿ ಮಾತನಾಡಿ ಈ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ ಯವರು ಶಿಕ್ಷಣ ಕ್ಷೇತ್ರಕ್ಕೆ ಮಹತ್ವ ನೀಡಿ ಹೆಚ್ಚಿನ ಶಾಲಾ ಕಾಲೇ-ಜಿಗೆ ಹೆಚ್ಚು ಒತ್ತು ನೀಡಿದ್ದರಿಂದ ಇಂದು ಈ ಗೌರವ ಸನ್ಮಾನ ಮಾಡುವದ-ರಿಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗುವದು ಎಂದು ಹೇಳಿದರು.

ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲಿ ವಿದ್ಯಾರ್ಥಿಗಳು ಶಿಕ್ಷಣ-ಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಪರಿಕ್ಷೆಗಳಲ್ಲಿ ಉತ್ತಮ ಅಂಕ ಪಡೆದು, ಶಾಲೆಗೂ ಹಾಗೂ ಪಾಲಕರಿಗೆ ಕೀರ್ತಿ ತರುವಲ್ಲಿ ಶ್ರಮಿಸಬೇಕು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಖಾಸಿಂಸಾಬ ತಳಕಲ್, ಹನುಮಂತಗೌಡ, ಯಂಕಣ್ಣ ಯರಾಶಿ, ಕೆರಿಬಸಪ್ಪ ನಿಡಗುಂದಿ, ಚಂಡೂರ್, ಮಹಿಳಾ ಕಾಂಗ್ರೆಸ್ ಮುಖಂಡರಾದ ಫರೀದಾಬೇಗಂ ತಂಬಾಕದವರು ಸೇರಿದಂತೆ ಮಹಿಳಾ ಮುಖಂಡರು ಇನ್ನಿತರರು ಇದ್ದರು.

## ಕುದ್ರಿಮೋತಿ: ಗ್ರಾಮಸ್ಥರ ಸಮ್ಮುಖದಲ್ಲಿ ಬುಡ್ನೇಸಾಬ್ ನವಲಿ ನೇಮಕ

ಅ.ಶ. ಸುದ್ದಿ ಕುಕನೂರು

**ಕುಕನೂರ: ತಾಲೂಕಿನ ಕುದ್ರಿಮೋತಿ ಗ್ರಾಮದಲ್ಲಿ ಗ್ರಾಮದ ದೈವದ ಸಮ್ಮುಖದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಚಂದಪ್ಪ ದೇವರು ಅವರ ಹೊಸ ಕುದುರಿಯಾಗಿ ಬುಡ್ನೇಸಾಬ್ ನವಲಿ ಅವರನ್ನು ಸಾಂಪ್ರದಾಯಿಕ ವಿಧಿವಿಧಾನಗಳೊಂದಿಗೆ ಹೊಸದಾಗಿ ನೇಮಕ ಮಾಡಲಾಯಿತು.**



ಕುದರಿಮೋತಿ ಮೊಹರಂ ಹಬ್ಬ ಅದ್ರೇ ರಾಜ್ಯದಲ್ಲಿ ಪ್ರಥಮ ಸ್ಥಾನ ಇದೆ ಆದಕಾರಣ ಚಂದಪ್ಪ ದೇವರು ಕುದರಿ ಹೊಸದಾಗಿ ಮಾಡಬೇಕಾಗುತ್ತದೆ ಆದಕಾರಣ ಗ್ರಾಮದ ಹಿರಿಯರು, ಮುಖಂಡರು ಹಾಗೂ ಭಕ್ತರ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬುಡ್ನೇಸಾಬ್ ನವಲಿ ಅವರಿಗೆ ಹೂಮಾಲೆ ಹಾಕಿ ಗೌರವಿಸಲಾಯಿತು. ಗ್ರಾಮದ ಸಂಪ್ರದಾಯ ಹಾಗೂ ಆಚಾರ-ವಿಚಾರಗಳನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಈ ನೇಮಕಾತಿ ಮಹತ್ವದ್ದಾಗಿದೆ ಎಂದು ಗ್ರಾಮಸ್ಥರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಮುಖಂಡರು ಸೇರಿದಂತೆ ಅನೇಕ ಭಕ್ತಾದಿಗಳು ಉಪಸ್ಥಿತರಿದ್ದು, ನೂತನ ಕುದುರಿ ಬುಡ್ನೇಸಾಬ್ ನವಲಿ ಅವರಿಗೆ ಶುಭ ಹಾರೈಸಿದರು.

# 226ನೇ ದಿನದಲ್ಲಿ ಬಲ್ಡೋಟ ಕಾರ್ಖಾನೆ ವಿರೋಧಿ ಧರಣಿ ಪೂರ್ಣ;

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರಸಭೆ ಮುಂದೆ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ನಡೆಯುತ್ತಿರುವ 226ನೇ ದಿನದ ಧರಣಿ ಹೋರಾಟ ಪೂರ್ಣಗೊಂಡಿತು. ಜಿಲ್ಲಾ ಕೇಂದ್ರಕ್ಕೆ ಹೊಂದಿಕೊಂಡು ಬಲ್ಡೋಟ ಬಿಎಸ್ಪಿ-ಎಲ್ ಕಂಪನಿ 14.02.2025ರಂದು ನಡೆದ ಜಾಗತಿ-ಕ ಹೂಡಿಕೆದಾರರ ಸಮಾವೇಶದಲ್ಲಿ 54 ಸಾವಿರ ಕೋಟಿ ವೆಚ್ಚದಲ್ಲಿ ಇಂಟಿಗ್ರೇಟೆಡ್ ಸ್ಟೀಲ್, ಕಲ್ಲಿದ್ದಲು ಸುಟ್ಟು ವಿದ್ಯುತ್ ಮತ್ತು ಕ್ರೂಡ್ ಟಾರ್ ತಯಾರಿಸುವ ಬೃಹತ್ ಕಾರ್ಖಾನೆ ಘಟಕ ಸ್ಥಾಪನೆ ಮಾಡಲು ಸರ್ಕಾರದಿಂದ ಅನುಮತಿ ಪಡೆದುಕೊಂಡಿತು.**




ಈ ಬೃಹತ್ ಹೂಡಿಕೆಯಿಂದ ಆಗುವ ಮಾಲಿನ್ಯದ ಅಪಾಯ ಕುರಿತು ಎಚ್ಚೆತ್ತುಕೊಂಡ ಗವಿಶ್ರೀಗಳು 2025ರ ಫೆ. 24ರಂದು ನಗರ ಬಂದ್ ಹೋರಾಟ ಮಾಡಿದರು. ಹತ್ತಾರು ಸಾವಿರ ಜನರು, ಸರ್ವ ಧರ್ಮದ ಧರ್ಮಾಧಿಕಾರಿಗಳು, ಪಕ್ಷಾತೀತವಾಗಿ ಬೆಂಬಲಿಸಿದ್ದ ಜನಪ್ರತಿನಿಧಿಗಳ ಸಮಕ್ಷಮದಲ್ಲಿ ಗವಿಶ್ರೀಗಳು ಧರ್ಮಾದೇಶ ಮಾಡಿ, ಕೊಪ್ಪಳ-ಭಾಗ್ಯನಗರ ಮತ್ತು ಸುತ್ತಲಿನ ಹಳ್ಳಿಗಳ ಜನರ ಆರೋಗ್ಯದ ಮೇಲೆ ಆಗುವ ಭವಿಷ್ಯದ ದುಷ್ಪರಿಣಾಮ ತಡೆಯಲು ಬಲ್ಡೋಟ ಕಂಪನಿಯ ಬೃಹತ್ ಹೂಡಿಕೆ ರದ್ದುಗೊಳಿಸಿದ ಆದೇಶ ಪತ್ರವನ್ನು ಸರ್ಕಾರದಿಂದ ಇಲ್ಲಿನ ಜನಪ್ರತಿನಿಧಿಗಳು ತರಬೇಕೆಂದು ಹೇಳಿದ್ದರು.

ಜನಪ್ರತಿನಿದಿನಗಳು ಇದುವರೆಗೆ ಆದೇಶ ಪತ್ರ ತಂದಿಲ್ಲ. ಸರ್ಕಾರದಿಂದ ಅನುಮತಿ ರದ್ದು ಮಾಡಿದ ಆದೇಶ ಪತ್ರ ತರಬೇಕೆಂದು, ನಗರದ ಪೂರ್ವ ಭಾಗದಲ್ಲಿ ಬಲ್ಡೋಟ ಎಂಎಸ್ಪಿಎಲ್ ಪೆಲ್ಲೆಟ್ ಘಟಕ 2011ರಿಂದ ಕಾರ್ಯಾಚರಣೆ ನಡೆಸುತ್ತಿದ್ದು, ಇದರ ಕಂದು, ಕಪ್ಪು ಧೂಳು ನಗರದ ಅರ್ಧ ಭಾಗ ಬಾಧಿಸುತ್ತಿದೆ. ಈ ಧೂಳಿನಿಂದ ನಗರದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಘಟಕ ಬಂದ್ ಮಾಡಿ ನಗರದ ಜನರ ಆರೋಗ್ಯ ಕಾಪಾಡಬೇಕೆಂದು, ಬಲ್ಡೋಟ ಕಂಪನಿ ಬಸಾಪುರ ಗ್ರಾಮದ ಕೆರೆಯನ್ನು ಅತಿ-ಕ್ರಮಣದಿಂದ ವಶಪಡಿಸಿಕೊಂಡು, ಕೆರೆಯ ಸುತ್ತ ಹಾಕಿದ ಕಾಂಪೌಂಡ್ ತೆರವು ಮಾಡಿ ಜಾನುವಾರು ನೀರು ಕುಡಿಯಲು ಅವಕಾಶ ಮಾಡಿಕೊಡಬೇಕೆಂದು,

ತುಂಗಭದ್ರಾ ನೀರು ವಿಷಗೊಳಿಸುತ್ತಿರುವ ಮಾಲಿನ್ಯಕಾರಿ ಕಾರ್ಖಾನೆಗಳನ್ನು ಮುಚ್ಚಬೇಕೆಂದು, ಹಿರೇಬಗನಾಳ, ಅಲ್ಲಾನಗರ ಪಕ್ಕದ ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕೇಂದ್ರ ಪರಿಸರ ಇಲಾಖೆ ವರದಿಯ ಶಿಫಾರಸಿನಂತೆ ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು, ಕಾರ್ಖಾನೆ ಧೂಳು ಬಾಧಿತ 22 ಹಳ್ಳಿಗಳ ಪುನರುಜ್ಜೀವನ ಮಾಡಲು ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು, ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್) ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಈ ಸ್ವಾಯತ್ತ ಸಂಸ್ಥೆಗಳಿಂದ ಜನರ ಆರೋಗ್ಯ ಮತ್ತು ಪರಿಸರ ಹಾನಿಯ ಸಮೀಕ್ಷೆ ನಡೆಸಬೇಕೆಂದು ಸರ್ಕಾರವನ್ನು ಆಗ್ರಹಿಸಿ 226 ದಿನಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದೆ.

ಇದೇ ಸಂದರ್ಭದಲ್ಲಿ ಹಿರೇಬಗನಾಳ, ಅಲ್ಲಾನಗರ ಹತ್ತಿರ ಮಾಲಿನ್ಯ ಮಾಡುವ ಸ್ಪಾಂಜ್ ಐರನ್ 5 ಕಾರ್ಖಾನೆಗಳಿಗೆ ಮುಚ್ಚುವ ಆದ-'ೀಶ ಮಾಡಿದ್ದರ ಪೈಕಿ ಮೂರು ಕಾರ್ಖಾನೆಗಳಿಗೆ ಇದುವರೆಗೆ ಬೀಗಮುದ್ರೆ ಮಾಡಿಲ್ಲ. ಒಂಬತ್ತು ಕಾರ್ಖಾನೆಗಳಿಗೆ ಪ್ರಸ್ತಾಪಿಸಿದ ಮುಚ್ಚುವ ಆದೇಶದಂತೆ ಕ್ರಮವಹಿಸಿ ಶಾಶ್ವತವಾಗಿ ಬೀಗಮುದ್ರೆ ಹಾಕಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಧರಣಿಯಲ್ಲಿ ನಿವೃತ್ತ ಉಪನ್ಯಾಸಕ ಡಾ. ಬಸವರಾಜ ಪೂಜಾರ, ಜಂಟಿ ಕ್ರಿಯಾ ವೇದಿಕೆಯ ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ಗಾಯಕ ಸದಾಶಿವ ಪಾಟೀಲ್, ನಿವೃತ್ತ ಅಂಚೆ ಅಧಿಕಾರಿ ರವಿ ಕಾಂತನವರ, ಮಹಿಳಾ ನಾಯಕಿ ಸರೋಜಾ ಬಾಕಳೆ, ರಾಜಶೇಖರ ಏಳುಬಾವಿ, ಎಸ್.ಮಹಾದೇವಪ್ಪ ಮಾವಿನಮಡು, ಶಿವಪ್ಪ ಜಲ್ಲಿ, ಮಾರುತಿ ನರಿ, ನೀಲಮ್ಮ ನರಿ, ಶಶಿಕಲಾ ಹೊಸಮನಿ, ಶಿವಪ್ಪ ಹಲಗೇರಿ, ಗಂಗಮ್ಮ ಕುರುಗೋಡು ಮುಂತಾದವರು ಪಾಲ್ಗೊಂಡರು.

# ಜಿಲ್ಲೆಯಲ್ಲಿ ಬಲವಂತದ 'ಪ್ರಿಪೇಯ್ಡ್ ಸ್ಮಾರ್ಟ್' ಮೀಟರ್ ಅಳವಡಿಕೆ

## ಅಳವಡಿಕೆ ಕೈ ಬೀಡುವಂತೆ : ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಕುರೇರಗೆ ಮನವಿ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಜಿಲ್ಲೆಯಾದ್ಯಂತ ಸಾರ್ವಜನಿಕರ ತೀವ್ರ ವಿರೋಧದ ನಡುವೆಯೂ ಜೆಸ್ಕಾಂ ವತಿಯಿಂದ ಏಕಪಕ್ಷೀಯವಾಗಿ ಜಾರಿಗೆ ತರಲಾಗುತ್ತಿರುವ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್‌ಗಳ ಕಡ್ಡಾಯ ಅಳವಡಿಕೆಯನ್ನು ತಕ್ಷಣವೇ ಕೈಬಿಡಬೇಕು ಮತ್ತು ಹಾಲಿ ಇರುವ ಪೋಸ್ಟ್ ಪೇಯ್ಡ್ ವ್ಯವಸ್ಥೆಯನ್ನೇ ಮುಂದುವರೆಸಬೇಕು ಎಂದು ಆಗ್ರಹಿಸಿ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಕೊಪ್ಪಳ ನಗರಕ್ಕೆ ಭೇಟಿ ನೀಡಿದ್ದ ಕಲಬುರ್ಗಿಯ ಜೆಸ್ಕಾಂ ಕಾರ್ಪೊರೇಟ್ ಕಚೇರಿಯ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಕುರೇರ ಅವರಿಗೆ ಮನವಿ ಸಲ್ಲಿಸಲಾಯಿತು.**

ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಕುರೇರ ಐಎಎಸ್ ಅವರಿಗೆ ಖುದ್ದಾಗಿ ಭೇಟಿ ಮಾಡಿ,12 ಮಾರ್ಚ್ 2026 ಸುತ್ತೋಲೆ ಪ್ರಕಾರ ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸುವಿಕೆಯಿಂದ ಸಾರ್ವಜನಿಕರಿಗಾಗುವ ತೊಂದರೆಗಳು ಹಾಗೂ ಪ್ರಾಯೋಗಿಕ ಸಮಸ್ಯೆಗಳನ್ನು ಸುದೀರ್ಘವಾಗಿ ಮನವರಿಕೆ ಮಾಡಿಕೊಟ್ಟರು. ಮನವಿ ಸಲ್ಲಿಸಿದ ಬಳಿಕ ಮಾತನಾಡಿ ಬಲವಂತದ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆಯು ಗ್ರಾಹಕರ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪ್ರಮುಖವಾಗಿ ನ್ಯಾಯಾಲಯಗಳ ಈ ಕೆಳಗಿನ ತೀರ್ಪುಗಳನ್ನು ಜೆಸ್ಕಾಂ ಗಮನಕ್ಕೆ ತರಲಾಗಿದೆ: ನೈಸರ್ಗಿಕ ನ್ಯಾಯದ ತತ್ವದ ಉಲ್ಲಂಘನೆ (ಗೌಹಾತಿ ಹೈಕೋರ್ಟ್): ಹಣ ಖಾಲಿಯಾದ ತಕ್ಷಣ ಯಾವುದೇ ಮುನ್ಸೂಚನೆ ಇಲ್ಲದೆ ಸ್ವಯಂಚಾಲಿತವಾಗಿ ವಿದ್ಯುತ್ ಕಡಿತಗೊಳಿಸುವುದು ಕಾನೂನುಬಾಹಿರ. ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 56(1) ಉಲ್ಲಂಘನೆ (ಅಲಹಾಬಾದ್ ಹೈಕೋರ್ಟ್): ಯಾವುದೇ ಗ್ರಾಹಕನ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಮುನ್ನ ಕನಿಷ್ಠ 15 ದಿನಗಳ ಲಿಖಿತ ನೋಟಿಸ್ ನೀಡುವುದು ಕಡ್ಡಾಯ. ಆದರೆ ಪ್ರಿಪೇಯ್ಡ್ ಮೀಟ–ರ್‌ಗಳು ಈ ನಿಯಮವನ್ನೇ ಗಾಳಿಗೆ ತೂರುತ್ತವೆ. ಗ್ರಾಹಕ ಸಂರಕ್ಷಣಾ ಕಾಯ್ದೆ 2019 : ಪ್ರತಿಯೊಬ್ಬ ಗ್ರಾಹಕನಿಗೂ ತನಗೆ ಬೇಕಾದ ಸೇವೆಯನ್ನು ಆಯ್ದುಕೊಳ್ಳುವ 'ಆಯ್ಕೆಯ ಹಕ್ಕಿದೆ' ಒಪ್ಪಿಗೆಯಿಲ್ಲದೆ ಸುಸ್ಥಿತಿಯಲ್ಲಿರುವ ಹಳೇ ಮೀಟರ್‌ಗಳನ್ನು ಕಿತ್ತೆಸೆಯುವುದು ಅಕ್ಷಮ್ಯ.

ಸಾರ್ವಜನಿಕರ ಪ್ರಾಯೋಗಿಕ ಕಳವಳಗಳು: ಕೊಪ್ಪಳ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಇಂಟರ್ನೆಟ್ ಮತ್ತು ಸರ್ವರ್ ಸಮಸ್ಯೆ ಸರ್ವೇಸಾಮಾನ್ಯವಾಗಿದೆ. ತಾಂತ್ರಿಕ ದೋಷಗಳಿಂದಾಗಿ ಹಣ ಪಾವತಿಸಿದರೂ ರೀಚಾರ್ಜ್ ಅಪ್‌ಡೇಟ್ ಆಗದೆ ವಿದ್ಯುತ್ ಕಡಿತಗೊಂಡರೆ ವಿದ್ಯಾರ್ಥಿಗಳು,ವೃದ್ಧರು ಹಾಗೂ ರೋಗಿಗಳು ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ. ಅಲ್ಲದೆ, ದಿನಗೂಲಿ ನೌಕರರು ಹಾಗೂ ಬಡ ಕುಟುಂಬಗಳಿಗೆ ಈ ಪ್ರಿಪೇಯ್ಡ್ ವ್ಯವಸ್ಥೆಯು ದೈನಂದಿನ ಬಜೆಟ್ ಮೇಲೆ ಭಾರಿ ಆರ್ಥಿಕ ಹೊರೆಯಾಗಲಿದೆ ಎಂದು ಒಕ್ಕೂಟ ಆತಂಕ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷರಾದ ಚನ್ನಬಸಪ್ಪ ಅಪ್ಪಣ್ಣವರ್. ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕರಾದ ತುಕಾರಾಮ್ ಎಮ್.ಪಾತ್ರೋಟಿ. ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಚಾಂದ್ ಪಾಷಾ ಗಂಗಾವತಿ. ಮಹೆಬೂಬ್ ಸೇರಿದಂತೆ ಹಲವು ಜನಪರ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

### ಒಕ್ಕೂಟದ ಪ್ರಮುಖ ಬೇಡಿಕೆಗಳು

- ಜಿಲ್ಲೆಯಲ್ಲಿ ನಡೆಯುತ್ತಿರುವ ಬಲವಂತದ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ತಕ್ಷಣ ನಿಲ್ಲಿಸಬೇಕು.
- ಸಾರ್ವಜನಿಕರು ಒಪ್ಪುವವರೆಗೂ ಪ್ರಸ್ತುತ ಚಾಲ್ತಿಯಲ್ಲಿರುವ ಪೋಸ್ಟ್ ಪೇಯ್ಡ್ ಮತ್ತು ಬಿಲ್ಲಿಂಗ್ ವ್ಯವಸ್ಥೆಯನ್ನೇ ಮುಂದುವರೆಸಬೇಕು.
- ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರಿಗೂ ಪೋಸ್ಟ್ ಪೇಯ್ಡ್ ಮೀಟರ್ ಆಯ್ಕೆ ಮಾಡಿಕೊಳ್ಳುವ ಮುಕ್ತ ಅವಕಾಶ ನೀಡಬೇಕು.
- ಜೆಸ್ಕಾಂ ಖಾಸಗೀಕರಣದ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟು, ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳಬೇಕು.

### ಉಗ್ರ ಪ್ರತಿಭಟನೆಯ ಎಚ್ಚರಿಕೆ

**ಒಂದು ವೇಳೆ ಸಾರ್ವಜನಿಕರ ಹಾಗೂ ಜನಪರ ಸಂಘಟನೆಗಳ ಒಕ್ಕೂಟದ ನ್ಯಾಯಯುತ ಬೇಡಿಕೆಗಳನ್ನು ನಿರ್ಲಕ್ಷಿಸಿ ಬಲವಂತದ ಅಳವಡಿಕೆಗೆ ಮುಂದಾದಲ್ಲಿ, ಜಿಲ್ಲೆಯಾದ್ಯಂತ ಉಗ್ರ ಪ್ರತಿಭಟನೆ ಹಾಗೂ ಕಾನೂನಾತ್ಮಕ ಹೋರಾಟವನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒಕ್ಕೂಟದ ಪದಾಧಿಕಾರಿಗಳು ಜೆಸ್ಕಾಂ ಉನ್ನತಾಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.**

## ಮಗಳನ್ನು ಕಾಲೇಜಿಗೆ ಬಿಡಲು ಹೋಗಿದ್ದ ತಾಯಿ ಸ್ಕೂಟರ್‌ನ ಅಪಘಾತದಲ್ಲಿ ದುರ್ಮರಣ

**ಅ.ಶ. ಸುದ್ದಿ ಬೆಗಳೂರು**

**ಬೆಂಗಳೂರು: ಮಗಳನ್ನು ಕಾಲೇಜಿಗೆ ಬಿಡಲು ಸ್ಕೂಟರ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಶಾಲಾ ಬಸ್ ಡಿಕ್ಕಿ ಹೊಡೆದ ಪರಿಣಾಮ ತಾಯಿ ಮೃತಪಟ್ಟಿರುವ ಘಟನೆ ವೈಟ್‌ಫೀಲ್?ಡ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ಬೆಳಗ್ಗೆ ನಡೆದಿದೆ. ನಲ್ಲೂರಹಳ್ಳಿ ನಿವಾಸಿ ಕಾಂತಾ (42) ಮೃತಪಟ್ಟ ದುರ್ದೈವಿ. ಇವರ ಮಗಳು ನೇಹಾ ಸಣ್ಣಪುಟ್ಟ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ.ಇಂದು ಬೆಳಗ್ಗೆ 7.45 ರ ಸುಮಾರಿನಲ್ಲಿ ಮಗಳನ್ನು ಕಾಲೇಜಿಗೆ ಬಿಡಲು ಕಾಂತಾ ಅವರು ಸ್ಕೂಟರ್‌ನಲ್ಲಿ ಕರೆದುಕೊಂಡು ವರ್ತೂರಿನಿಂದ ಮಾರತಹಳ್ಳಿ ಕಡೆಗೆ ಹೋಗುತ್ತಿದ್ದರು.**




ಸಿದ್ದಾಪುರದ ಮೀನಾಕ್ಷಿ ಲೇಔಟ್ ಬಳಿ ರಸ್ತೆಯ ಗುಂಡಿಯಲ್ಲಿ ಮಳೆ ನೀರು ನಿಂತಿರುವುದು ಗಮನಿಸಿದ ಕಾಂತಾ ಅವರು ತಮ ಸ್ಕೂಟ–ರ್‌ನನ್ನು ಪಕ್ಕಕ್ಕೆ ತೆಗೆದುಕೊಳ್ಳುತ್ತಿದ್ದಂತೆ ಹಿಂದಿನಿಂದ ವೇಗವಾಗಿ ಬಂದ ಶಾಲಾ ಬಸ್ ಡಿಕ್ಕಿ ಹೊಡೆದಿದೆ.ಪರಿಣಾಮ ಕಾಂತಾ ಅವರು ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ. ಸುದ್ದಿ ತಿಳಿದು ವೈಟ್‌ಫೀಲ್ಡ್ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಬೈಕ್‌ಗಳಿಗೆ ಡಿಕ್ಕಿ ಹೊಡೆದು ಕಾರು ಪಲ್ಟಿ : ಕಾರ್ಪೆಂಟರ್ ಬಲಿ ಬೆಂಗಳೂರು,ಜೂ.13– ಅತಿ ವೇಗವಾಗಿ ಹೋಗುತ್ತಿದ್ದ ಕಾರೊಂದು ನಿಯಂತ್ರಣ ತಪ್ಪಿ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ ಕಾರಿನಲ್ಲಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಇಂದು ಬೆಳಗ್ಗೆ ಕೆಂಗೇರಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತ ವ್ಯಕ್ತಿಯನ್ನು ಸುಖದೇವ್ (45) ಎಂದು ಗುರುತಿಸಲಾಗಿದೆ. ಇವರು ವೃತ್ತಿಯಲ್ಲಿ ಕಾರ್ಪೆಂಟರ್. ಇಂದು ಬೆಳಗ್ಗೆ 6.45 ರ ಸುಮಾರಿನಲ್ಲಿ ನಾಲ್ಕು ಮಂದಿ ಕಾರಿನಲ್ಲಿ ನಗರದಿಂದ ಮೈಸೂರು ಕಡೆಗೆ ತೆರಳುತ್ತಿದ್ದಾಗ ಮೈಸೂರು ರಸ್ತೆಯ ಮೈಲಸಂದ್ರ ಗೇಟ್ ಬಳಿ ಕಾರು ಚಾಲಕನ ನಿಯಂತ್ರಣ ತಪ್ಪಿ ಎರಡು ಬೈಕ್‌ಗಳಿಗೆ ಅಪ್ಪಳಿಸಿ ನಂತರ ಉರುಳಿ ಬಿದ್ದಿದೆ. ಪರಿಣಾಮ ಕಾರಿನಲ್ಲಿದ್ದ ನಾಲ್ವರ ಪೈಕಿ ಒಬ್ಬರು ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ. ಅಪಘಾತದಿಂದಾಗಿ ಬೈಕ್‌ಗಳಲಿದ್ದ ಇಬ್ಬರು ಸವಾರರು ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.ಸುದ್ದಿ ತಿಳಿದು ಕೆಂಗೇರಿ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.ಅಪಘಾತಕ್ಕೆ ಚಾಲಕನ ಅತಿ ವೇಗ, ಅಜಾಗರೂಕತೆ ಚಾಲನೆಯೇ ಕಾರಣವೆಂಬುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕೆಎಸ್‌ಆರ್‌ಟಿಸಿ ಬಸ್‌ಗೆ ಲಾರಿ ಡಿಕ್ಕಿ :ಪ್ರಾಣ ಕಳೆದುಕೊಂಡ ಇಬ್ಬರು ಪ್ರಯಾಣಿಕರು ಬೆಂಗಳೂರು,ಜೂ.13– ಮುಂದೆ ಹೋಗುತ್ತಿದ್ದ ಕೆ–ಎಸ್‌ಆರ್‌ಟಿಸಿ ಬಸ್‌ಗೆ ಹಿಂದಿನಿಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಪ್ರಯಾಣಿಕರು ಮೃತಪಟ್ಟಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಬೀಳಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ಬೆಳಗ್ಗೆ ನಡೆದಿದೆ. ಬಾಗಲಕೋಟೆಯ ನಿವಾಸಿ ರಾಣಿ ದೇಸಾಯಿ (35) ಹಾಗೂ ನರಗುಂದ ನಿವಾಸಿ ಶಿವಕುಮಾರ್ (25) ಮೃತಪಟ್ಟವರು.ಇಂದು ಬೆಳಗ್ಗೆ 11.30 ರ ಸುಮಾರಿನಲ್ಲಿ ರಾಷ್ಟ್ರೀಯ ಹೆದ್ದಾರಿ ಅಗನವಾಡಿ ಬಳಿ ಕೆಎಸ್‌ಆರ್‌ಟಿಸಿ ಬಸ್‌ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಅತಿ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬಸ್‌ನಲ್ಲಿದ್ದ ಇಬ್ಬರು ಪ್ರಯಾಣಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ.

## ಬಸ್ ಸೌಕರ್ಯವಿಲ್ಲದೇ ಖಾಸಗಿ ವಾಹನಗಳ ಮೊರೆ ಹೋದ ವಿದ್ಯಾರ್ಥಿಗಳು

**ಅ.ಶ. ಸುದ್ದಿ ಕೊಪ್ಪಳ**

**ಕುಕನೂರು: ತಾಲ್ಲೂಕಿನ ಚನ್ನಪಹಳ್ಳಿ, ಹಾಗೂ ಹರಿಶಂಕರ ಬಂಡಿಯಿಂದ ಪ್ರತಿನಿತ್ಯ ಇಪ್ಪತ್ತು, ಮೂವತ್ತು ವಿದ್ಯಾರ್ಥಿಗಳು ಕುಕನೂರು ಪಟ್ಟಣದ ಸರಕಾರಿ ಹಾಗೂ ಖಾಸಗಿ ಶಾಲೆಗಳಿಗೆ ವ್ಯಾಸಾಂಗಕ್ಕೆ ತೆರಳುತ್ತಿದ್ದು ಶಾಲಾ ಸಮಯಕ್ಕೆ ವಾಹನಗಳ ಸೌಕರ್ಯವಿಲ್ಲದೇ ವಿದ್ಯಾರ್ಥಿಗಳು ಪರದಾಡುವಂತಾಗಿದೆ.**

ಪ್ರತಿ ನಿತ್ಯ ಎರಡು ಗ್ರಾಮಗಳಿಂದ ಸುಮಾರು ಇಪ್ಪತ್ತು, ಮೂವತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕುಕನೂರು ಪಟ್ಟಣದ ವಿವಿಧ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿದ್ದು, ಶಾಲಾ ಸಮಯಕ್ಕೆ ಸರಿಯಾಗಿ ಸರಕಾರಿ ವಾಹನ, (ಬಸ್) ಸೌಲಭ್ಯವಿಲ್ಲದೇ ವಿದ್ಯಾರ್ಥಿಗಳು ಅನಿವಾರ್ಯವಾಗಿ ಖಾಸಗಿ ವಾಹನಗಳ ಮೊರೆ ಹೋಗುತ್ತಿರುವುದು ಕಂಡು ಬಂದಿದೆ.



ಶನಿವಾರದಂದು ಮಧ್ಯಾಹ್ನ 1ಗಂಟೆಗೆ ಶಾಲೆ ಬಿಟ್ಟಿದ್ದು, ವಿದ್ಯಾರ್ಥಿಗಳು ಕುಕನೂರು ಪಟ್ಟಣದಿಂದ ಹರಿಶಂಕರ ಬಂಡಿ, ಚನ್ನಪ್ಪನಹಳ್ಳಿಗೆ ಜೆಸಿಬಿ ವಾಹನದಲ್ಲಿ ತೆರಳುತ್ತಿರುವುದು ಕಂಡು ಬಂದಿತು.

ವಿದ್ಯಾರ್ಥಿಗಳು ಅದು ಹೇಗೋ ಕಷ್ಟ ಪಟ್ಟ ಯಾವುದಾದರು ದ್ವಿ ಚಕ್ರ ವಾಹನ ಹಾಗೂ ಖಾಸಗಿ ವಾಹನಗಳ ಮೊರೆ ಹೋಗಿ ಗ್ರಾಮಗಳನ್ನು ತಲುಪಿದರೇ, ವಿದ್ಯಾರ್ಥಿನಿಯರು ಸುಮಾರು ನಾಲ್ಕೈದು ಕಿಲೋ ಮೀಟರ್ ನಡೆದುಕೊಂಡು ಗ್ರಾಮ ತಲುಪಬೇಕಾದ ಅನಿವಾರ್ಯತೆ ಇದೆ. ಈ ಗ್ರಾಮಗಳಿಗೆ ಅಟೋಗಳು, ಟಂಟಂ ವಾಹನಗಳು ಸಂಚರಿಸುತ್ತಿದ್ದು, ಅವುಗಳು ಭರ್ತಿಯಾದರೇ ಮಾತ್ರ ಅವುಗಳನ್ನು ಬಿಡುತ್ತಾರೆ.

ಅಲ್ಲಿಯವರೆಗೆ ಕಾಯುತ್ತಾ ನಿಲ್ಲಬೇಕು. ಖಾಸಗಿ ವಾಹನಗಳನ್ನು ಹೊರತು ಪಡಿಸಿ ಶಾಲಾ ಸಮಯಕ್ಕೆ ಬಸ್ ಸೌಕರ್ಯವಿಲ್ಲಾ ಎಂದು ವಿದ್ಯಾರ್ಥಿಗಳು ತಮ್ಮ ಅಳಲನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು. ಕೇವಲ ಇದು ವಿದ್ಯಾರ್ಥಿಗಳಿಗೆ ತೊಂದರೆಯಲ್ಲದೇ ಈ ಎರಡು ಗ್ರಾಮಗಳ ಸಾರ್ವಜನಿಕರು ಕುಕನೂರು, ಯಲಬುರ್ಗಾ ಪಟ್ಟಣಗಳಿಗೆ ವ್ಯಾಪಾರ, ವಹಿವಾಟು, ಇಸ್ಪತ್ರೆಗಳಿಗೆ ಸಂಚರಿಸಬೇಕೆಂದರೇ ಅವರು ಖಾಸಗಿ ವಾಹನಗಳ ಮೊರೆ ಹೋಗುತ್ತಾರೆ, ಈ ಗ್ರಾಮಗಳ ವೃದ್ದರು, ಮಹಿಳೆಯರು ಆಸ್ಪತ್ರೆಗಳಿಗೆ ತೆರಳಲು ಪ್ರಯಾಸ ಪಡುವುದಂತು ತಪ್ಪಿದ್ದಲ್ಲಾ, ಯಾವುದಾದರು ಖಾಯಿಲೆಗಳಿಗೆ ಕೂಡಲೇ ಆಸ್ಪತ್ರೆಗಳಿಗೆ ಹೋಗಬೇಕೆಂದರೇ ಖಾಸಗಿ ವಾಹನಗಳಲ್ಲಿ ಅವರು ಕೇಳಿದಷ್ಟು ಹಣ ನೀಡಿ ಹೋಗುವುದು ಅನಿವಾರ್ಯವಾಗಿದೆ.

ಈ ಎರಡು ಗ್ರಾಮಗಳ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಸಂಚಾರದ ಹಿತ ದೃಷ್ಠಿಯಿಂದ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಮೂರು ಸಮಯಕ್ಕೆ ಕುಕನೂರು ಮಾರ್ಗವಾಗಿ ಹರಿಶಂಕರಬಂಡಿ ವಾಯಾ ಕಲ್ಲೂರು ಮೂಲಕ ಯಲಬುರ್ಗಾಕ್ಕೆ ಬಸ್ ಬಿಡುವಂತೆ ವಿದ್ಯಾರ್ಥಿಗಳು, ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಮೊಹರಂ ಹಬ್ಬ ಶಾಂತಿಯುತ ಆಚರಿಸಿ ; ಪಿಐ ಪ್ರಕಾಶ್ ಯಾತನೂರು

**ಅ.ಶ. ಸುದ್ದಿ ಗಂಗಾವತಿ**

**ಗಂಗಾವತಿ: ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವದ ಸಂಕೇತವಾಗಿ ಆಚರಿಸಬೇಕು. ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಾರ್ವಜನಿಕರು ಹಾಗೂ ವಿವಿಧ ಸಮುದಾಯದ ಮುಖಂಡರು ಪೊಲೀಸ್ ಇಲಾಖೆಗೆ ಸಹಕ–ರಿಸಬೇಕು ಎಂದು ನಗರ ಪೊಲೀಸ್ ಠಾಣೆಯ ಪಿಐ ಪ್ರಕಾಶ್ ಯಾತನೂರು ತಿಳಿಸಿದರು.**

ನಗರ ಪೊಲೀಸ್ ಠಾಣೆ ಆವರಣದಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೆರವಣಿಗೆಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿಗದಿತ ಮಾರ್ಗಸೂಚಿಗಳ ಪ್ರಕಾರ ನಡೆಸಬೇಕು. ವದಂತಿಗಳಿಗೆ ಕಿವಿಗೊಡದೆ, ಯಾವುದೇ ಸಮಸ್ಯೆ ಕಂಡುಬಂದಲ್ಲಿ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಗಂಗಾವತಿ ನಗರ ಪೊಲೀಸ್ ಠಾಣೆ ಪಿಎಸ್‌ಐ ಟಿ.ಜಿ.ನಾಗರಾಜ, ಇಸ್ಮಾಯಿಲ್,




ಜೆಸ್ಕಾಂ ಅಧಿಕಾರಿ ಎ.ಮಂಜುನಾಥ, ನಗರಸಭೆ ಸಿಬ್ಬಂದಿ ಷಣ್ಮುಖಪ್ಪ, ನಗರ ಪೊಲೀಸ್ ಠಾಣೆ ಎ.ಎಸ್.ಐ ಶಿವಶರಣ,ವೀರೇಶ ಸಂಕನೂರು, ನಗರಸಭೆ ಮಾಜಿ ಅಧ್ಯಕ್ಷ ಹನುಮಂತಪ್ಪ ನಾಯಕ್, ಕರವೇ ಜಿಲ್ಲಾಧ್ಯಕ್ಷ ಪಂಪಣ್ಣ ನಾಯಕ್, ದೇವರ ಮನಿ ಹುಲಗಪ್ಪ,

ಮುಸ್ಲಿಂ ಸಮಾಜದ ಮುಖಂಡರಾದ ರಾಜಹುಸೇನಸಾಬ,ಹೈದರ್ ಅಲಿಸಾಬ, ಈರಣ್ಣ ಹಂಚಿನಾಳ, ಮಾರುತಿ ಹಂಚಿನಾಳ, ಸೈಯದ್ ಸಜ್ಜಾದ್, ಹುಸೇನಸಾಬ,ಅಮೀನಸಾಬ, ಹೊನ್ನೂರಲ್ಲಿ ಹಿರೇಜಂತಕಲ್, ಹಾಗೂ ಸಭೆಯಲ್ಲಿ ವಿವಿಧ ಸಮುದಾಯಗಳ ಮುಖಂಡರು, ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

## ಮುಂಗಾರಿಗೆ ಎಲ್‌ನಿನೋ ಅಡ್ಡಗಾಲು : ಅನ್ನದಾತರ ಆತಂಕ

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ಮುಂಗಾರು ಮಳೆ ಆರಂಭವಾಗುತ್ತಿದ್ದಂತೆಯೇ ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದ ಜನರಿಗೆ ಇದೀಗ ನಿರಾಸೆಯ ಸುದ್ದಿ ಎದುರಾಗಿದೆ. ರಾಜ್ಯದಲ್ಲಿ ಜೂನ್ ಮೊದಲ ವಾರದಲ್ಲಿ ಮುಂಗಾರು ಪ್ರವೇಶಿಸಿದರೂ, ಆರಂಭಿಕ ಚುರುಕಿನ ನಂತರ ಮಳೆಯ ಪ್ರಮಾಣದಲ್ಲಿ ಕುಸಿತ ಕಂಡುಬಂದಿದ್ದು, ಮುಂದಿನ ದಿನಗಳಲ್ಲಿಯೂ ನಿರೀಕ್ಷೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.**

ಜೂನ್ 4ರಿಂದ ರಾಜ್ಯದಲ್ಲಿ ಮುಂಗಾರು ಮಳೆ ಆರಂಭವಾಗಿದ್ದು, ಈ ಬಾರಿ ಉತ್ತಮ ಮಳೆಯ ನಿರೀಕ್ಷೆಯಲ್ಲಿ ರೈತರು ಬಿತ್ತನೆ ಕಾರ್ಯಗಳಿಗೆ ಸಿದ್ಧತೆ ನಡೆಸಿದ್ದರು. ಆದರೆ ಮುಂಗಾರು ಆರಂಭವಾಗಿ ಕೇವಲ ಒಂದು ವಾರ ಕಳೆದಿದ್ದರೂ ಮಳೆಯ ತೀವ್ರತೆ ಕಡಿಮೆಯಾಗಿದ್ದು,



ಹಲವು ಜಿಲ್ಲೆಗಳಲ್ಲಿ ಮಳೆ ವಿರಳವಾಗಿದೆ. ಇದ–ರಿಂದ ರೈತಾಪಿ ವರ್ಗದಲ್ಲಿ ಆತಂಕ ಹೆಚ್ಚಾಗಿದೆ. ತಜ್ಞರ ಪ್ರಕಾರ, ಪೆಸಿಫಿಕ್ ಮಹಾಸಾಗರದ ಮಧ್ಯ ಹಾಗೂ ಪೂರ್ವ ಭಾಗಗಳಲ್ಲಿ ಸಮುದ್ರದ ಮೇಲ್ಮೈ ತಾಪಮಾನ ಅಸಹಜವಾಗಿ ಏರಿಕೆಯಾಗುತ್ತಿರುವುದು ಪ್ರಮುಖ ಕಾರಣವಾಗಿದೆ. ಈ ಹವಾಮಾನ ಸ್ಥಿತಿಯನ್ನು "ಎಲ್‌ನಿನೋ" ಎಂದು ಕರೆಯಲಾಗುತ್ತದೆ. ಎಲ್‌ನಿನೋ ಪರಿಣಾಮದಿಂದ ಜಾಗತಿಕ ಹವಾಮಾನ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿ, ಭಾರತದ ಮುಂಗಾರು ಮಳೆಯ ಪ್ರಮಾಣ ಮತ್ತು ಹಂಚಿಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಸಾಮಾನ್ಯವಾಗಿ ಎಲ್‌ನಿನೋ ಸಂಭವಿಸುವ ವರ್ಷಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಹವಾಮಾನ ತಜ್ಞರು ವಿವರಿಸುತ್ತಾರೆ. ಕರ್ನಾಟಕದಲ್ಲೂ ಇದರ ಪರಿಣಾಮ ಗೋಚ–ರಿಸುವ ಸಾಧ್ಯತೆ ಇದೆ. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದ್ದರೂ, ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನ ಸುಮಾರು 19 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಿತ್ತನೆ ಸಮಯದಲ್ಲೇ ಮಳೆಯ ಕೊರತೆ ಎದುರಾಗುವ ಸಾಧ್ಯತೆಯಿಂದ ರೈತರು ಕಳವಳಗೊಂಡಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಮುಂದಿನ ಒಂದು ವಾರ ಮಳೆಯ ಚಟುವಟಿಕೆ ಕಡಿಮೆಯಾಗುವ ಸಾಧ್ಯತೆ ಇದೆ.

ಒಟ್ಟಾರೆ ಈ ಬಾರಿ ಮಳೆಯ ಪ್ರಮಾಣ ವಾಡಿಕೆಗಿಂತ ಶೇ.8 ರಿಂದ 10 ರಷ್ಟು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚು ನೀರಿನ ಅವಶ್ಯಕತೆ ಇರುವ ಬೆಳೆಗಳ ಬದಲಿಗೆ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಹವಾಮಾನ ತಜ್ಞರು ರೈತರಿಗೆ ಸಲಹೆ ನೀಡಿದ್ದಾರೆ. ಎಲ್‌ನಿನೋ ಪರಿಣಾಮದಿಂದ ಮುಂಗಾರು ಆರಂಭದಲ್ಲೇ ಹಿನ್ನಡೆ ಕಂಡಿದ್ದು, ಮಳೆ ಅವಲಂಬಿತ ಕೃಷಿ ನಡೆಸುವ ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿಸಿರುವುದು ವಾಸ್ತವ. ಮುಂದಿನ ವಾರಗಳಲ್ಲಿ ಹವಾಮಾನದಲ್ಲಿ ಏನಾದರೂ ಬದಲಾವಣೆ ಆಗುತ್ತದೆಯೇ ಎಂಬುದರತ್ತ ಎಲ್ಲರ ಚಿತ್ತ ನೆಟ್ಟಿದೆ.

## ಗಜಲ್



ನಾನಿತ್ತ ಪ್ರೀತಿಯ ಹೂಗಳನು ತುಳಿದು ಹೊಸಕಿ ಮೆರೆಯಬೇಡ
ಎದೆಯಲಿ ಮೂಡಿದ ಎಳೆಯ ಭಾವಗಳನು ಮುರಿಯಬೇಡ

ಕಣ್ಣಂಚಿನಲಿ ತುಳುಕುತಲಿವೆ ಅಳಿದುಳಿದ ಕಣ್ಣೀರ ಹನಿಗಳು
ನಿರುಕಿಸುವ ದಾರಿಯಲಿ ಕೆಡುಕಿನ ಮುಳ್ಳುಗಳನು ಸುರಿಯಬೇಡ

ನನ್ನೊಲವಿನ ಹೃದಯ ನೊಂದು ಸೀಳಿದ ಕನ್ನಡಿಯಂತಾಗಿದೆ
ಇನ್ನೂ ಅರಳದ ನಗೆ ಮೊಗ್ಗುಗಳನು ಚಿವುಟಿ ಹರಿಯಬೇಡ

ಕಂಡ ಕನಸುಗಳು ರೆಕ್ಕೆ ಮುರಿದ ಹಕ್ಕಿಯಂತಾಗಿ ನೆಲ ಕಚ್ಚಿವೆ
ಬಯಕೆಗಳಿಗೆ ಕೊಳ್ಳಿ ಇಟ್ಟು ಕೇಕೆ ಹಾಕುತ ಉರಿಯಬೇಡ

ಮೋಸದ ಚಂದದ ಚಿತ್ತಾರದಿ ಬೂದಿ ಮುಚ್ಚಿದ ಕೆಂಡ ನೀನು
ಬೇಗಂಳ ಇರುಳು ಕಳೆದು ಮರಳಿ ಬೆಳಗಾಗುವುದು
ಮರೆಯಬೇಡ



ಹಮೀದಾಬೇಗಂ
ದೇಸಾಯಿ.ಸಂಕೇಶ್ವರ.

# ಸಾಧನೆಗೆ ಸ್ಫೂರ್ತಿ

ಸ್ಪರ್ಧೆಗಳು ಪ್ರಾರಂಭವಾಯಿತು.ಒಬ್ಬರಿಗಿಂತ ಒಬ್ಬರು ತುಂಬಾ ವಿದ್ವತ್ ಪೂರ್ಣವಾಗಿ ಹಾಡುತ್ತಿದ್ದರು. ವಿದ್ಯಾ ತಾನೇ ತುಂಬಾ ಅಭ್ಯಾಸ ಮಾಡಿಕೊಂಡು ಬಹಳಷ್ಟು ತಯಾರಿ ನೆಡೆಸಿದ್ದೇನೆ ಎನ್ನುವ ವಿಶ್ವಾಸ ಉಳಿದವರೆಲ್ಲಾ ಹಾಡುವುದನ್ನು ಕಂಡಾಗ ಕುಸಿಯತೊಡಗಿತು. ಇವರೆಲ್ಲಾ ಎಷ್ಟು ಚೆನ್ನಾಗಿ ಹಾಡುತ್ತಿದ್ದಾರೆ,ತನಗೆ ಖಂಡಿತಾ ಬಹುಮಾನ ಬರುವುದು ಕಷ್ಟ ಎಂದು ಮನಸ್ಸಿನಲ್ಲಿಯೇ ಅಂದುಕೊಂಡಳು. ಒಬ್ಬರಾದ ಮೇಲೆ ಒಬ್ಬರು ವೇದಿಕೆ ಏರಿ ಸಂಗೀತ ಕಚೇರಿ ಮಾಡುವ ರೀತಿಯಲ್ಲಿ ಹಾಡಿ ತಮ್ಮ ಪ್ರೌಢಿಮೆಯನ್ನು ಪ್ರದರ್ಶಿಸುತ್ತಿದ್ದರು.

ಇವಳ ಸರಧಿ ಬರುವುದರೊಳಗೆ ವಿದ್ಯಾಳಲ್ಲಿ ಇದ್ದ ಆತ್ಮ ವಿಶ್ವಾಸ ಪೂರ್ಣವಾಗಿ ಕರಗಿ ಹೋಗಿತ್ತು. ಆದರೂ ತನ್ನ ಕಾಲೇಜನ್ನು ಪ್ರತಿನಿಧಿಸುವುದಕ್ಕಾಗಿಯಾದ ರೂ ವಿದ್ಯಾ ಹಾಡಲೇ ಬೇಕಾಗಿತ್ತು. ವಿದ್ಯಾ ಸ್ವಲ್ಪ ಅಂಜುತ್ತಲೇ ವೇದಿಕೆ ಏರಿದಳು. ವೇದಿಕೆಯಲ್ಲಿ ತನ್ನ ಗುರುಗಳ ಹೆಸರು,ತಾನು ಹಾಡುತ್ತಿರುವ ಕೃತಿ,ರಾಗ ತಾಳಗಳನ್ನು ಹೇಳಿ ತೀರ್ಪುಗಾರ-ರಿಗೆ ವಂದಿಸಿ ಅಲಾಪನೆ ಪ್ರಾರಂಭ ಮಾಡಿದಳು. ಅಂದೇಕೋ ವಿದ್ಯಾಳ ಹಾಡುಗಾ-ರಿಕೆಯಲ್ಲಿ ಶ್ರುತಿ ಸರಿಯಾಗಿ ಸೇರುತ್ತಿರಲಿಲ್ಲ.

ಎಷ್ಟು ಪ್ರಯತ್ನಿಸಿದ್ರು ಅಂದಿನ ಅವಳ ಗಾಯನ ಅವಳಿಗೆ ತೃಪ್ತಿ ಕೊಡುವಂತೆ ಇರಲಿಲ್ಲ.ಏನೋ ಮನಸ್ಸಿನಲ್ಲಿ ಕಸಿವಿಸಿ, ತನ್ನ ಅಭ್ಯಾಸದಲ್ಲಿನ ಕೊರತೆ ಅಂದು ವಿದ್ಯಾಳಿಗೆ ಮನದಟ್ಟಾಯಿತು. ತನ್ನ ಊರಿನಲ್ಲಿ ತಾನೊಬ್ಬಳೇ ಹಾಡುವುದು ಎಂದು ಭಾವಿಸಿದಂತೆ ಬೇರೆ ಸ್ಥಳಕ್ಕೆ ಹೋದಾಗಲೇ ನಮಗಿಂತ ಬೇರೆಯವರು ಎಷ್ಟು ಸಾಧನೆ ಮಾಡಿರುತ್ತಾರೆ ಎಂಬ ಪರಿಚಯವಾಗುವುದು.ವಿದ್ಯಾಳಿಗೆ ಇದು ತುಂಬಾ ಚೆನ್ನಾಗಿ ಅರಿವಿಗೆ ಬಂದಿತು. ಅಂತೂ ಇಂತೂ ಹಾಡಿ ವೇದಿಕೆಯನ್ನು ಇಳಿದು ಬಂದಳು.ವಿದ್ಯಾಳ ನಂತರದ ಸ್ಪರ್ಧಿಯೇ ಕೊಳಲನ್ನು ನುಡಿಸುತ್ತಿದ್ದ ಆ ಯುವಕನಾಗಿದ್ದ. ಅವನು ಹಾಡಲು ಪ್ರಾರಂಭಿಸುತ್ತಿದ್ದಂತೆಯೇ ಅಲ್ಲಿದ್ದವರೆಲ್ಲಾ ಅವನ ಧ್ವನಿಯ ಮಾಧುರ್ಯ,ಸಂಸ್ಕಾರ, ಹಾಗೂ ಗಾಂಭೀರ್ಯ ಕಂಡು ಮಂತ್ರ ಮುಗ್ಧರಾದರು.

ತೀರ್ಪುಗಾರರಂತೂ ಅವನ ವಿದ್ವತ್ತಿಗೆ ತಲೆ ದೂಗುತ್ತಿದ್ದರು. ಅವನ ಪ್ರೌಢ ಆಲಾಪನೆ, ಅವನ ಧ್ವನಿಯಲ್ಲಿ ಬಿರ್ಕಾಗಳು ನುಡಿಯುತ್ತಿದ್ದ ರೀತಿ,ಸ್ವರ ಪ್ರಸ್ತಾರದಲ್ಲಿನ ಚತುರತೆ ಅಲ್ಲಿದ್ದವರನ್ನೆಲ್ಲಾ ಬೆರಗು ಗೊಳಿಸಿತು.ವಿದ್ಯಾ ಅಂತೂ ಕಣ್ಣು ರೆಪ್ಪೆ ಮುಚ್ಚದೇ ಅವನ ಗಾಯನವನ್ನು ತನ್ಮಯತೆಯಿಂದ ಆಲಿಸುತ್ತಿದ್ದಳು. ಅವನು ಹಾಡಿ ಮುಗಿಸುತ್ತಿದ್ದಂತೆ ಇಡೀ ಹಾಲ್ ನಲ್ಲಿ ಚಪ್ಪಾಳೆಯ ಸದ್ದು ಝೇಂಕ-ರಿಸಿತು.ತನ್ನ ಹೆಸರು ವಿದ್ಯಾಧರ ಎಂದೂ, ಅವನು ತನ್ನ ತಂದೆಯ ಬಳಿಯಲ್ಲಿಯೇ ಸಂಗೀತ ಅಭ್ಯಾಸ ಮಾಡುತ್ತಿರುವುದಾಗಿ ತನ್ನನ್ನು ತಾನು ಪರಿಚಯಿಸಿಕೊಂಡ.

ಅವನ ಅದ್ಭುತ ಗಾಯನದ ಎದುರು



ಉಳಿದೆಲ್ಲ ವಿದ್ಯಾರ್ಥಿಗಳು ಹಾಡಿದುದು ತೀರಾ ಸಪ್ಪೆ ಎನಿಸಿತು.ವಿದ್ಯಾ ಅವನು ಕೊಳಲು ನುಡಿಸುತ್ತಿದ್ದುದನ್ನು ನೋಡಿ ಅವನು ವಾದ್ಯ ನುಡಿಸಲು ಬಂದಿದ್ದಾನೆ ಎಂದು ಅಂ-ದುಕೊಂಡಿದ್ದಳು.ಆದರೆ ಕೊಳಲನ್ನು ನುಡಿಸಿದಷ್ಟೇ ಸುಂದರವಾಗಿ ಹಾಗೂ ವಿದ್ವತ್ ಪೂರ್ಣವಾಗಿ ಅವನು ಗಾಯನ ಸ್ಪರ್ಧೆಯಲ್ಲಿಯೂ ತನ್ನ ವಿದ್ವತ್ ಪ್ರದರ್ಶನ ಮಾಡಿದ್ದ. ವಿದ್ಯಾಳಿಗಂತೂ ಇಲ್ಲಿ ಹಾಡುತ್ತಿರುವವರನ್ನೆಲ್ಲಾ ನೋಡಿ ತಾನಿನ್ನೂ ಎಷ್ಟು ಸಾಧನೆ ಮಾಡಬೇಕು ಎನ್ನುವುದು ಮನದಟ್ಟಾಯಿತು. ವಿದ್ಯಾಧರ ಡಿಗ್ರಿಯ ಕೊನೆಯ ವರ್ಷದಲ್ಲಿ ಓದುತ್ತಿರುವ ಯುವಕ. ವಾಣಿಜ್ಯ ವಿಭಾಗ ತೆಗೆದುಕೊಂಡು ಶೃಂಗೇರಿಯ ಕಾಲೇಜ್ ನಲ್ಲಿ ವ್ಯಾಸಂಗ ಮಾಡುತ್ತಿದ್ದ. ಆದರೆ ಸಂಗೀತ ಕ್ಷೇತ್ರದಲ್ಲಿ ಈಗಾಗಲೇ ಬಹಳಷ್ಟು ಸಾಧನೆಯನ್ನು ಮಾಡಿದ್ದಾನೆ.

ಆಕಾಶವಾಣಿಯ ಯುವವಾಣಿ ವಿಭಾಗದಲ್ಲಿ ಅವನು ಈಗಾಗಲೇ ಹಾಡುತ್ತಿದ್ದು ಹಲವಾರು ಸ್ಪರ್ಧೆಳಲ್ಲಿಯೂ ಬಹುಮಾನ ವನ್ನು ಪಡೆದಿದ್ದಾನೆ. ಅವರ ತಾತ ಮತ್ತು ತಂದೆ ಕೂಡಾ ದೊಡ್ಡ ಸಂಗೀತ ವಿದ್ವಾಂಸರು. ಒಟ್ಟಿನಲ್ಲಿ ಸಂಗೀತ ಪರಂಪರೆ.ವಿದ್ಯಾಧರನನ್ನು ಮಾತನಾಡಿಸಿದಾಗ ವಿದ್ಯಾಳಿಗೆ ಈ ಎಲ್ಲಾ ವಿಷಯಗಳು ತಿಳಿದು ಬಂದಿತು.ಸ್ವಲ್ಪವೂ ಅಹಂಕಾರವಿಲ್ಲದ ಮಾತು, ನಡತೆ ಅವನದ್ದು.ವಿದ್ಯಾ ತಾನು ಇಂದು ಶ್ರುತಿ ಸೇ-ರಿಸದೆ ಹಾಡಿದ ಬಗ್ಗೆ ಅವನ ಬಳಿ ಹೇಳುವಾಗ ಅವಳ ಕಣ್ಣಾಲಿಗಳು ತುಂಬಿ ಬಂದವು..

ವಿದ್ಯಾಧರ ಅವಳನ್ನು ಸಮಾಧಾನಿಸುತ್ತಾ ಮನಸ್ಸು ಶಾಂತವಾಗಿ-ರಿಸಿಕೊಂಡು ಶ್ರುತಿಯಲ್ಲಿ ತನ್ಮಯತೆಯನ್ನು ಸಾಧಿಸಿಕೊಳ್ಳಬೇಕು. ಸಾಧನೆ ನಿರಂತರವಾಗಿರಬೇಕು. ಶ್ರದ್ಧೆ ಭಕ್ತಿ ಇರಬೇಕು ಹೀಗೆ ಸಂಗೀತ ಸಾಧನಯ ಬಗೆಗೆ ಕೆಲವು ಟಿಪ್ಸ್ ಗಳನ್ನು ವಿದ್ಯಾಧರ ಹೇಳಿದ. ಹಾಗೂ ಶೃಂಗೇರಿಗೆ ಬಂದಾಗತಮ್ಮ ಮನೆಗೆ ಬರಬೇಕೆಂದು ವಿದ್ಯಾಳನ್ನು ಆಹ್ವಾನಿಸಿ ಹೊರಟ. ಅಂದಿನ ಸ್ಪರ್ಧೆಯಲ್ಲಿ ವಾದನ ಹಾಗೂ ಗಾಯನ ಎರೆಡರಲ್ಲೂ ಅವನಿಗೇ ಪ್ರಥಮ ಬಹುಮಾನ ಸಿಕಿತ್ತು. ಅವನ ಸಾಧನೆಯು ವಿದ್ಯಾಳಿಗೆ ಸ್ಫೂರ್ತಿಯಾಯಿತು. ಎಲ್ಲಾ ಸಾಧಕರಿಗೂ ದಿನದಲ್ಲಿ 24 ಗಂಟೆಯೇ ಇರುವುದು.ಆದರೆ ಅದನ್ನು ಅವರು ಹೇಗೆ ಉಪಯೋಸಿಕೊಂಡು ಸಾಧನೆ ಮಾಡುತ್ತಾರೆ ಎನ್ನುವುದು ಮುಖ್ಯವಾಗಿರುತ್ತದೆ.



ಬದುಕಿನ ಬುತ್ತಿ ಜಂಬೆ.
ಎಸ್.ವಿದ್ಯಾರಾಣಿ.

# ಆಶಯದಂತೆ ರಚನೆಗೊಂಡ ನಾಟಕ ಒಂದು ವಿಮರ್ಶೆ

ನಾಟಕ ಒಂದು ಸಮ್ಮಿಶ್ರ, ಸಂಕೀರ್ಣವಾದ ಕಲೆ. ನಾಟಕ ಏನು ಹೇಳುತ್ತೆ, ನಾಟಕಕಾರನ ಆಶಯ ಏನು ಎಂಬುದನ್ನು ಸರಿಯಾಗಿ ಅರಿತು ಅಭಿನಯಿಸಿದರೆ ನಾಟಕ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ರಂಗಭೂಮಿಯಲ್ಲಿ ನೋಡಿ ಕಲಿಯುವಂತಹದ್ದು ಸಾಕಷ್ಟಿದೆ. ನಟನಾದವನಿಗೆ ಸಮಯ ಪ್ರಜ್ಞೆ ಬಹಳ ಮುಖ್ಯ. ವಾಚಿಕ-ಆಂಗಿಕಗಳ ನಡುವೆ ಗಾಢ ಸಂಬಂಧವಿದೆ. ಧ್ವನ್ಯಾತ್ಮಕ ಪ್ರಯೋಗಗಳ ಅರಿವು, ಮಾತಿನ ತೂಕ, ಔಚಿತ್ಯ ಇವೆಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿ ಅಭಿನಯಿಸಿದರೆ ನಾಟಕ ಪರಿಣಾಮಕಾ-ರಿಯಾಗುತ್ತದೆ. ನಟನಾದವನು ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು.

ಅದಲ್ಲದೆ ಪರಕಾಯ ಪ್ರವೇಶ ಮಾಡಬೇಕು ನಾಟಕ ಎಂಬುದು ಸಂಯುಕ್ತ ರಂಗಭೂಮಿಯೇ ಆಗಿದೆ. ನಾಟಕ ಕೃತಿ ಭವ್ಯ, ದಿವ್ಯವಾಗುವುದು ನಟರ ನೈಪುಣ್ಯದಿಂದ. ನಾಟಕದಲ್ಲಿ ಬದುಕಿನ ಸತ್ಯ ಶೋಧನೆ, ವಿಮರ್ಶೆ ನಡೆಯುತ್ತದೆ ಎಂದು ಡಾ.ಬಿ ಕೆ ಮಾದಿಯವರು ನಾಟಕದ ಏಕವ್ಯಕ್ತಿ ಪ್ರಯೋಗದ ಮೂಲಕ ತಿಳಿಸಿದ್ದಾರೆ. ರಂಗಭೂಮಿ ಇಂದಿಗೂ ತನ್ನ ಕ್ರಿಯಾಶೀಲತೆಯನ್ನು ಉಳಿಸಿಕೊಂಡು ಬಂದಿದೆ. ಕನ್ನಡರಂಗಭೂಮಿ ಅಷ್ಟು ಜನಪ್ರಿಯವಾಗಿಲ್ಲ. ಹೀಗಿದ್ದೂ ಕನ್ನಡದಲ್ಲಿ ಅತ್ಯುತ್ತಮ ನಾಟಕಗಳ ಕೊರತೆ ಇಲ್ಲ ನಟರ ಸಾಧನೆಯನ್ನು ಗುರುತಿಸುವ ಮೂಲಕ ನಾಟಕೀಯ ಪ್ರಜ್ಞೆಯನ್ನು ರೂಡಿಸಿಕೊಳ್ಳುವ ಅವಶ್ಯವಿದೆ ಎಂಬುದು ನಾಟಕದುದ್ದಕ್ಕೂ ಕ್ರಿಯಾಶೀಲವಾಗಿ ಮೂಡಿಬಂದಿದೆ. ನಾಟಕ ಕಲೆಯು ಮಾನವನ ಅಂತರಂಗ ಮತ್ತು ಬಹಿರಂಗ ಲೋಕದ ಸಂಕೀರ್ಣ ಸಂಬಂಧವನ್ನು ಪ್ರತಿಬಿಂಬಿಸುವ ಜೀವಂತ ಮಾಧ್ಯಮವಾಗಿದೆ.

ಈ ಕಲಾ ಪ್ರಕಾರದ ವಿಕಾಸಯಾತ್ರೆಯಲ್ಲಿ ವಿಭಿನ್ನ ಪ್ರಯೋಗಶೀಲ ರೂಪಗಳು ಅಸ್ತಿತ್ವಕ್ಕೆ ಬಂದಿವೆ. ಏಕವ್ಯಕ್ತಿ ನಾಟಕವು ಅವುಗಳಲ್ಲಿ ಅತ್ಯಂತ ವಿಶಿಷ್ಟವಾದ ಪ್ರಕಾರವಾಗಿದ್ದು, ನಟನ ಮನಸ್ಸಿನ ಆಂತರಿಕ ಸಂಭಾಷಣೆ ಪ್ರಜ್ಞೆ ಮತ್ತು ಸುಪ್ತಪ್ರಜ್ಞೆಯ ಕಲಾತ್ಮಕ ಅಭಿವ್ಯಕ್ತಿಯಾಗಿದೆ. ಇದು ಕೇವಲ ನಟನ ತಾಂತ್ರಿಕ ಕೌಶಲ್ಯ ಪ್ರದರ್ಶನವಲ್ಲ. ಬದಲಾಗಿ ಸಾಹಿತ್ಯ, ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ತಾತ್ವಿಕ ನೈಜತೆಯ ಸೂಕ್ಷ್ಮ ಸಂಯೋಜನೆಯಾಗಿದೆ. ಈ ಪ್ರಬಂಧವು ಏಕವ್ಯಕ್ತಿ ನಾಟಕದ ತಾತ್ವಿಕ ಉಗಮ, ಅದರ ಜಾಗತಿಕ ವಿಕಾಸದ ಹಂತಗಳು, ಪಾಶ್ಚಾತ್ಯ ಮತ್ತು ಭಾರತೀಯ ರಂಗಭೂಮಿಗಳ ಪರಂಪರೆಯಲ್ಲಿ ಅದರ ಸ್ಥಾನ ಮತ್ತು ವಿಶೇಷವಾಗಿ ಕನ್ನಡ ರಂಗಭೂಮಿಯಲ್ಲಿನ ಮಹತ್ವದ ಪ್ರಯೋಗಗಳು ಹಾಗೂ ಅದರ ಸಮಕಾಲೀನ ಸವಾಲುಗಳ ಕುರಿತು ಆಳವಾದ ವಿಶ್ಲೇಷಣಾತ್ಮಕ ಅಧ್ಯಯನ ನಡೆಸುತ್ತದೆ.

ಅದನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಬದುಕಿನ ಏರಿಳಿತಗಳನ್ನು ಅರಿತು ಅಳವಡಿಸಿ ಅನಂತತೆಯಲ್ಲಿ ಬಿಂಬಿಸಲಾಗಿದೆ. ಸ್ವಾತಂತ್ರ್ಯನಂತರದ ಭಾರತೀಯ ರಾಷ್ಟ್ರೀಯ ರಂಗಭೂಮಿಯ ಹೊರಹೊಮ್ಮುವಿಕೆಯನ್ನು ಗುರುತಿಸುತ್ತದೆ. ಸಾಂಪ್ರದಾಯಿಕ ಪ್ರದರ್ಶನ ಪ್ರಕಾರಗಳು ಮತ್ತು ಸಮಕಾಲೀನ ರಂಗಭೂಮಿ ಕೆಲಸಗಳ ನಡುವಿನ ಆಡುಭಾಷೆಯ ಮೇಲೆ ಕೇಂದ್ರೀಕರಿಸುತ್ತದೆ. ಇಲ್ಲಿ ಕುಖ್ಯಾತಿ ಎಂದರೆ ಆಧುನಿಕ ಭಾರತೀಯ ಪುರುಷ ನಾಟಕಕಾರರ ನಾಟಕೀಯ ಪಠ್ಯ, ಸಾಂಪ್ರದಾಯಿಕ ಕಲಾ ಪ್ರಕಾರಗಳು ಮತ್ತು ಸಮಕಾಲೀನ ಭಾಷಾವೈಶಿಷ್ಟ್ಯಗಳ ನಡುವೆ ಪರಸ್ಪರ ಸಂಬಂಧವನ್ನು ಸ್ಥಾಪಿಸುವ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಯನ್ನು ಅರಿತುಕೊಳ್ಳ ಬೇಕಾಗಿರುವುದು ಎಂದಿಗಿಂತಲೂ ಇಂದು ಪ್ರಸ್ತುತವಾಗಿದೆ.

"ಏನು ಮಾಡಿ ಏನು ಬಂತು ಬಸ್ಯಾ" ನಾಟಕದ ಮೂಲಕ ಅವರ ಕೆಲವು ನಿರ್ಮಾಣಗಳನ್ನು ಅವರ ಪ್ರಾಯೋಗಿಕ ಮತ್ತು ನವೀನ ನಾಟಕಶಾಸ್ತ್ರದ ಸಂಕೇತವಾಗಿ ಗುರುತಿಸುತ್ತದೆ. ಇದರಲ್ಲಿ ವಾಸ್ತವಿಕತೆ, ಪಠ್ಯ, ಪ್ರದರ್ಶನ ಶೈಲಿ ಮತ್ತು ಆದ-



ನಿಕತೆಯ ಹೊಸ ತಿಳುವಳಿಕೆಯು ಮುಳುಗಿಸುವ ಗೋಚರತೆಯನ್ನು ಕಂಡುಕೊಳ್ಳುತ್ತದೆ. ಆದಾಗ್ಯೂ, ಇದು ನಾಟಕಕಾರರ ಕಲಾತ್ಮಕ ಪ್ರಯತ್ನಗಳ ನಡುವಿನ ಸಮಾನಾಂತರಗಳನ್ನು ಒತ್ತಿಹೇಳುತ್ತದೆ ಮತ್ತು ಸೆಳೆಯುತ್ತದೆ. ಅವರ ವೈಯಕ್ತಿಕ ಸೂಕ್ಷ್ಮ ವ್ಯತ್ಯಾಸಗಳು ಮತ್ತು ಅವರ ಬರಹಗಳಲ್ಲಿ ಸ್ಪಷ್ಟವಾಗಿ ಕಂಡುಬರುವ ಕಲಾತ್ಮಕ ಅಭಿವ್ಯಕ್ತಿಗಳನ್ನು ಸಹ ವಿವರಿಸುತ್ತದೆ. ರಂಗಭೂಮಿಯಲ್ಲಿ ನಾವೀನ್ಯತೆ ಮತ್ತು ಪ್ರಯೋಗಗಳನಿರಂತರ ವಿದ್ಯಮಾನಗಳಾಗಿವೆ. ನಾಟಕವು ಒಂದು ಪ್ರದರ್ಶನ ಕಲೆಯಾಗಿರುವುದ-ರಿಂದ ಕವಿತೆ ಅಥವಾ ಕಾದಂಬರಿಗೆ ಅಗತ್ಯವಿಲ್ಲದ ತಕ್ಷಣದ ಆಕರ್ಷಣೆಯನ್ನು ಹೊಂದಿದೆ. ಆರಂಭದಲ್ಲಿ, ನಾಟಕವನ್ನು ಪ್ರದರ್ಶಿಸಲು ಮಾತ್ರ ಉದ್ದೇಶಿಸಲಾಗಿತ್ತು. ನಂತರ ಅದನ್ನು ವಿಶ್ಲೇಷಿಸಲು ಮತ್ತು ಅರ್ಥೈಸಲು ಉದ್ದೇಶಿಸಲಾದ ಪಠ್ಯದ ರೂಪದಲ್ಲಿ ಬರೆಯಲು ಪ್ರಾರಂಭಿಸಿತು.

ಪ್ರದರ್ಶನ ಮತ್ತು ಮನರಂಜನೆಯೊಂದಿಗೆ, ಜನರ ಇತಿಹಾಸದ ವಿಶಾಲ ಸಂದರ್ಭದಲ್ಲಿ ರಂಗಭೂಮಿಯ ಸಾಮಾಜಿಕ ಮತ್ತು ಸಾಂಸ್ಕೃತಿ-ಕ ಪಾತ್ರವನ್ನು ನಿರ್ಲಕ್ಷಿಸಲಾಗುವುದಿಲ್ಲ. ನಮ್ಮ ರಂಗಭೂಮಿ ಕಾಲಕಾಲಕ್ಕೆ ವಿವಿಧ ರೀತಿಯ ಜನಪ್ರಿಯ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ ಇದು ಸಾಂಸ್ಕೃತಿಕ ಗುರುತು, ಸಾಮಾಜಿ-ಕ ಸುಧಾರಣೆ ಮತ್ತು ರಂಗಭೂಮಿಯ ವಿಕಸನ, ವಿಷಯ ಮತ್ತು ರೂಪದ ಮೇಲೆ ವಿಶಾಲವಾದ ಪ್ರಭಾವದಿಂದ ಸಾಕ್ಷಿಯಾಗಿದೆ. ಆಧುನಿಕ ರಂಗಭೂಮಿ ವಾಣಿಜ್ಯ ಬಂದರುಗಳಾಗಿ ಸ್ಥಾಪಿಸಿದ ವಸಾಹತುಶಾಹಿ ನಗರಗಳಲ್ಲಿ ಪ್ರಾರಂಭವಾಯಿತು.


ಈ ನಗರಗಳು ನಗರ ಮಧ್ಯಮ ವರ್ಗದ ಪ್ರೇಕ್ಷಕರನ್ನು ಹೊಂದಿದ್ದವು, ಅವರು ಪಡೆದ ಇಂಗ್ಲಿಷ್ ಶೈಲಿಯ ಶಿಕ್ಷಣ ಮತ್ತು ಆಡಳಿತ ಮತ್ತು ವಾಣಿಜ್ಯದಲ್ಲಿ ಬ್ರಿಟಿಷರೊಂದಿಗೆ ಕೆಲಸ ಮಾಡುವ ಅಗತ್ಯದಿಂದ ರೂಪುಗೊಂಡ ಮೌಲ್ಯಗಳು ಮತ್ತು ಅಭಿರುಚಿಗಳನ್ನು ಹೊಂದಿದ್ದವು. ಈ ಯುಗದಲ್ಲಿ ಹೆಚ್ಚಿನ ರಂಗಭೂಮಿಯು ಬ್ರಿಟಿಷ್ ನಾಟಕವನ್ನು ಪುನರಾವರ್ತಿಸಿತು ಮತ್ತು ಆದ್ದರಿಂದ ಸ್ವಲ್ಪ ಮಟ್ಟಿಗೆ ಸೌಂದರ್ಯಶಾಸ್ತ್ರ, ನಾಟಕಶಾಸ್ತ್ರದ ರಚನೆಗಳು ಮತ್ತು ಪಾಶ್ಚಿಮಾತ್ಯ ಸೌಂದರ್ಯಶಾಸ್ತ್ರದ ವಾಸ್ತುಶಿಲ್ಪವನ್ನು ಸಹ ಪಡೆದುಕೊಂಡಿತು. ಭಾರತದಲ್ಲಿ ಆದ-ನಿಕ ರಂಗಭೂಮಿಯ ಅಭಿವೃದ್ಧಿಯವರೆಗೆ, ಹೆಚ್ಚಿನ ಪ್ರದರ್ಶನಗಳು ವೃತ್ತಿ ರಂಗಭೂಮಿಯ ವೇದಿಕೆಯ ಮೇಲೆ ನಡೆಯಲಿಲ್ಲ, ಅವು ಟಿಕೆಟ್ ಮಾರಾಟವನ್ನು ಅವಲಂಬಿಸಿರಲಿಲ್ಲ, ಬದಲಿಗೆ ಪ್ರೋತ್ಸಾಹದ ಮೇಲೆ ಅವಲಂಬಿತವಾಗಿದ್ದವು.

ಹೆಚ್ಚಿನ ಆಧುನಿಕ ರಂಗಭೂಮಿಗೆ ಅಳವಡಿಸಿಕೊಂಡು ಭಾಗವಹಿಸುವವರನ್ನು ವೀಕ್ಷಕ-ರಿಂದ ಬೇರ್ಪಡಿಸಿತು. ಟಿಕೆಟ್ ಮಾರಾಟವು ರಂಗಭೂಮಿಯನ್ನು ಒಂದು ಸರಕಾಗಿ ಒತ್ತು ನೀಡಿತು, ಇದು ಸಣ್ಣ ಮತ್ತು ಶ್ರೀಮಂತ ಜನರ ಗುಂಪಿಗೆ ಲಭ್ಯವಾಗುವಂತೆ ಮಾಡಿತು. ಸ್ವಾತಂತ್ರ್ಯದ ನಂತರ ಪರಿಸ್ಥಿತಿ ಬದಲಾಯಿತು, ಹೊಸ ಶಕ್ತಿಯ ಅಗಾಧ ಬಿಡುಗಡೆಯು ಕಲೆಗಳಲ್ಲಿ ಪುನರುಜ್ಜೀವನವನ್ನು ತಂದಿತು, ಇದು ದೇಶಾದ್ಯಂತ ನಾಟಕೀಯ ಮತ್ತು ನಾಟಕೀಯ ಚಟುವಟಿ-ಕೆಯ ಹೊಸ ಉತ್ತುಂಗಕ್ಕೆ ಕಾರಣವಾಯಿತು. ಹಲವಾರು ನಾಟಕಕಾರರು ಬ್ರಿಟಿಷ್ ಮಾದ-ರಿಗಳನ್ನು ಅನುಸರಿಸದ ಒಂದು ರೀತಿಯಲ್ಲಿ ಭಾರತೀಯವಾದ ರಂಗಭೂಮಿಯನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಅನುಭವಿಸಿದರು.

ಇದು ಕಾಲಕಾಲಕ್ಕೆ ಹಲವಾರು ನವ್ಯ ಪ್ರವೃತ್ತಿಗಳಿಗೆ ಕಾರಣವಾಯಿತು, ಅದು ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ಪ್ರಾದೇಶಿಕ ರಂಗಭೂಮಿ ಸಂಪ್ರದಾಯಗಳಿಂದ – ಶಾಸ್ತ್ರೀಯ ಮತ್ತು ಜಾನಪದ ಎರಡರಿಂದಲೂ ಸ್ಫೂರ್ತಿ ಪಡೆಯಿತು. ಈ ಪ್ರಯೋಗಗಳು ಮತ್ತು ನಾವೀನ್ಯತೆಗಳು ಭಾರತೀಯ ರಂಗಭೂಮಿಯ ಚೈತನ್ಯ ಮತ್ತು ದೃಢತೆಯ ಸಂಕೇತಗಳಾಗಿವೆ. ಜನಪ್ರಿಯ ಮತ್ತು ಉನ್ನತ ಮಟ್ಟದ ನಡುವಿನ ಹಲವಾರು ಸೌಂದರ್ಯ-ಸೈದ್ಧಾಂತಿ-ಕ ವಿವಾದಗಳಿಗೆ ಕಾರಣವಾಗಿದೆ, ರಂಗಭೂಮಿ ಮತ್ತು ಬೀದಿ ರಂಗಭೂಮಿ, ಸಾಂಪ್ರದಾಯಿಕ ಮತ್ತು ಜಾನಪದ ರಂಗಭೂಮಿಯ ಸಂಪ್ರದಾಯಗಳೊಂದಿಗೆ ವ್ಯತಿರಿಕ್ತವಾದ ಪ್ರದರ್ಶನ ಅಂಶಗಳ ಬಳಕೆ ಮತ್ತು ಅವುಗಳನ್ನು ದುರುಪಯೋಗ ಎಂದು ನಿರೂಪಿಸುವುದರ ಜೊತೆಗೆ. ಸಾಂಪ್ರದಾಯಿಕ ಭಾರತೀಯ ಪ್ರದರ್ಶನ ಪ್ರಕಾರಗಳ ಬಳಕೆಯ ಕುರಿತು ಹಲವಾರು ನಾಟಕಕಾರರು, ರಂಗ ಕರ್ಮಿಗಳು ಹೇಳುತ್ತಾರೆ.

'ಇತರ ಕೆಲವು ಸಾಂಸ್ಕೃತಿ-ಕ ಸಂದರ್ಭದಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದ ರೂಪಗಳನ್ನು ಕಂಡುಹಿಡಿಯುವುದು ಮತ್ತು ಮರುಬಳಕೆ ಮಾಡುವುದು ಪ್ರಯತ್ನವಲ್ಲ.' ಬದಲಾಗಿ ಈ ಪ್ರಕಾರಗಳ ಆಧಾರದ ಮೇಲೆ ಮನರಂಜನೆಯ ಬಗ್ಗೆ ನಿರೀಕ್ಷೆಗಳು ಮತ್ತು ಸಂಪ್ರದಾಯಗಳ ರಚನೆ ಇದೆಯೇ ಎಂಬುದನ್ನು ಕಂಡುಹಿಡಿಯುವುದು ಆಶಯವಾಗಿತ್ತು, ಇದರಿಂದೊಬ್ಬರು ಕಲಿಯಬಹುದು' 70 ರ ದಶಕದಲ್ಲಿ, ಸಂಗೀತ ನಾಟಕ ಅಕಾಡೆಮಿ ತನ್ನ ಜರ್ನಲ್‌ನ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿತು, ಇದು ಸಮಕಾಲೀನ ರಂಗಭೂಮಿ ಕೆಲಸಕ್ಕಾಗಿ ಸಂಪ್ರದಾಯವನ್ನು ಬಳಸಿಕೊಳ್ಳುವ ಪ್ರಯತ್ನಗಳ ಸಾಧಕ-ಬಾಧಕಗಳ ಕುರಿತು ಚರ್ಚೆಯನ್ನು ಒಳಗೊಂಡಿದೆ.

ಇದು ಭಾರತದಲ್ಲಿ ಸಾಂಪ್ರದಾಯಿಕ ರಂಗಭೂಮಿಯ ಸಮಕಾಲೀನ ಪ್ರಸ್ತುತತೆಯ ಕುರಿತು ಒಂದು ಸುತ್ತಿನ ಸಭೆಯಾಗಿದ್ದು, ಹೆಚ್ಚಿನ ಪ್ರಮುಖ ರಂಗಭೂಮಿ ದಿಗ್ಗಜರು ಇದರ ಬಗ್ಗೆ ತಮ್ಮ ಸೈದ್ಧಾಂತಿಕ ದೃಷ್ಟಿಕೋನಗಳನ್ನು ವ್ಯಕ್ತಪಡಿಸಿದ್ದಾರೆ. ಸಾಂಪ್ರದಾಯಿಕ ರಂಗಭೂಮಿಯ ಬಗ್ಗೆ ನನಗೆ ಏನೂ ತಿಳಿದಿಲ್ಲ. ನಾನು ಪ್ರಾಯೋಗಿಕವಾಗಿ ಯಾವುದೇ ಜಾತ್ರಾವನ್ನು ನೋಡಿಲ್ಲ. ಆದರೆ ನನ್ನಂತಹ ನಗರ ವ್ಯಕ್ತಿಯಿಂದ ನಗರ ಪ್ರೇಕ್ಷಕರಿಗಾಗಿ ಮಾಡಬಹುದಾದ, ನಗರ ರಂಗಭೂಮಿಯಲ್ಲಿ ಬಳಸಬಹುದಾದ ರೂಪದ ಬಗ್ಗೆ ಇತರ ಜನರಿಂದ





ನಾನು ಕೇಳಿರುವ ಕೆಲವು ವಿಷಯಗಳು ಬಹುಶಃ ರೂಪದಲ್ಲಿವೆ ಎಂದು ನಾನು ಭಾವಿಸುತ್ತೇನೆ. ಎಂದು ಹಲವಾರು ನಾಟಕಕಾರರು ವಿವರಿಸುತ್ತಾರೆ.

ಉದ್ದೇಶಪೂರ್ವಕ, ಪ್ರಜ್ಞಾಪೂರ್ವಕ ಮತ್ತು ಕೃತಕವಾಗಿ ಒಡ್ಡಿಕೊಳ್ಳುವುದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ ಸಾಂಪ್ರದಾಯಿಕ ರೂಪಗಳು ಅವಶ್ಯಕ, ಏಕೆಂದರೆ ನಮ್ಮ ಸಂಪ್ರದಾಯ ಏನೇ ಇರಲಿ ಅದಕ್ಕೆ ನಾವು ಒಗ್ಗಿಕೊಳ್ಳುತ್ತಿದ್ದೇವೆ. ನಮ್ಮ ದೈನಂದಿನ ಜೀವನ – ಹುಟ್ಟಿನಿಂದಲೇ. ನನ್ನ ಅಗತ್ಯಗಳಿಗೆ ಸರಿಹೊಂದುವ ಯಾವುದಾದರೂ ಜಾನಪದ ರೂಪದಲ್ಲಿ ಪಾಲ್ಗೊಳ್ಳಲು ನಾನು ಬಯಸುತ್ತೇನೆ – ನಾನು ನನ್ನದನ್ನು ಕಂಡುಕೊಳ್ಳಲು ಬಯಸುತ್ತೇನೆ ಈ ಅಭಿಪ್ರಾಯಗಳು ಸಾಂಪ್ರದಾಯಿಕ ರೂಪಗಳು ನಾಟಕಕಾರನ ಮೇಲೆ ಪ್ರಭಾವ ಬೀರುವ ಕೆಲವು ವಿಧಾನಗಳನ್ನು ಸೂಚಿಸುತ್ತವೆ. ಹಲವಾರು ಭಾರತೀಯ ಭಾಷೆಗಳಲ್ಲಿ ನಾಟಕ ಬರವಣಿಗೆಗೆ ಅತ್ಯಂತ ಮಹತ್ವದ್ದಾಗಿದೆ.

ಪುನರುಜ್ಜೀವನ ಮತ್ತು ಬಲವರ್ಧನೆಗಳ ಪ್ರಕ್ಷುಬ್ಧ ವರ್ಷಗಳಲ್ಲಿ ಸಕ್ರಿಯವಾಗಿದ್ದ ಪ್ರಮುಖ ಭಾಷಾ ರಂಗಭೂಮಿಗಳು ಹಿಂದಿ, ಬಂಗಾಳಿ, ಮರಾಠಿ ಮತ್ತು ಕನ್ನಡ. ನಾಟಕಗಳು ನಮ್ಮ ಸಾಮಾಜಿಕ ಜೀವನ ಮತ್ತು ವೈಯಕ್ತಿಕ ಮನಸ್ಸಿನ ಹಲವು ಪದರಗಳನ್ನು ಅನ್ವೇಷಿಸಿದವು. ಅವುಗಳಲ್ಲಿ ಹಲವು ಆಳವಾದ ಸಾಮಾಜಿಕ ವಾಸ್ತವಗಳು ಮತ್ತು ಮಾನವ ಅಸ್ತಿತ್ವದ ಪ್ರಮುಖ ಸಮಸ್ಯೆಗಳ ಬಗ್ಗೆ ತೀಕ್ಷ್ಣವಾದ ಅವಲೋಕನ ಮತ್ತು ಕಾಳ-ಜಿಯನ್ನು ಬಹಿರಂಗಪಡಿಸುತ್ತವೆ. ಯುದ್ಧ ಮತ್ತು ಮನುಷ್ಯನ ನೈತಿಕ ಮತ್ತು ಭೌತಿಕ ಜೀವನದ ಮೇಲೆ ಅದರ ಪ್ರಭಾವ, ಜೀವನದ ಅರ್ಥ ಮತ್ತು ಉದ್ದೇಶ, ರಾಜಕೀಯ ಅಧಿಕಾರಕ್ಕಾಗಿ ಹೋರಾಟ, ಪುರುಷ-ಮಹಿಳೆ ಸಂಬಂಧಗಳ ಉದಯೋನ್ಮುಖ ಮಾದರಿಗಳು ಮತ್ತು ಎಲ್ಲವನ್ನೂ ಒಳಗೊಂಡಿವೆ. ಸಾಮಾಜಿಕ ಮತ್ತು ವೈಯಕ್ತಿಕ ಸಂಬಂಧಗಳ ಈ ವ್ಯಾಪಕ ಪರಿಶೋಧನೆಯನ್ನು ತೀಕ್ಷ್ಣವಾದ, ಪ್ರಚೋದಿಸುವ ನಾಟಕೀಯ ಚಿತ್ರಗಳು ಮತ್ತು ಆಗಾಗ್ಗೆ ಸೃಜನಶೀಲ ರಚನೆಗಳ ಮೂಲಕ ನಡೆಸಲಾಗಿದೆ.

ಇದು ಈ ನಾಟಕವನ್ನು ನಮ್ಮ ದೀರ್ಘ ಮತ್ತು ವೈವಿಧ್ಯಮಯ ಸಂಪ್ರದಾಯಕ್ಕೆ ಸಂಪರ್ಕಿಸುವ ವಿಶಿಷ್ಟ ಭಾರತೀಯ ನಾಟಕ ರೂಪಕ್ಕಾಗಿ ದೃಢೀಕರಣ ಮತ್ತು ಗುರುತನ್ನು ಹುಡುಕಲು ಕಾರಣವಾಗಿದೆ ಮತ್ತು ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಪ್ರದಾಯಗಳಲ್ಲಿ ಭವಿಷ್ಯದ ಬಗ್ಗೆ ಮತ್ತು ಅರ್ಥಪೂರ್ಣವಾಗಿ ಎಲ್ಲವನ್ನೂ ಸೇ-ರಿಸುವ ಮೂಲಕ ಅದನ್ನು ಉತ್ಕೃಷ್ಟಗೊಳಿಸುತ್ತದೆ ಮತ್ತು ಅಭಿವೃದ್ಧಿಪಡಿಸುತ್ತದೆ. ನಾಟಕಕಾರರು, ವಿಶೇಷವಾಗಿ 60 ರ ದಶಕದ ನಂತರದ ಬರಹಗಾರರು, ರಂಗಭೂಮಿ ಮತ್ತು ಆಧುನಿಕ ರಂಗಭೂಮಿ ಬಳಸುವ ರೂಪಗಳ ಬಹುಸಂಖ್ಯೆಯ ಬಗ್ಗೆ ಹೆಚ್ಚಿನ ಅರಿವು ತೋರಿಸಿದ್ದಾರೆ.

ನಂತರದ ದಶಕಗಳಲ್ಲಿ ದೇಶದ ಹಲವು ಭಾಗಗಳಲ್ಲಿ ಬರೆಯಲ್ಪಟ್ಟ ಮತ್ತು ಪ್ರದರ್ಶಿಸಲ್ಪಡುತ್ತಿರುವ ಹೊಸ ನಾಟಕಗಳ ಸರಣಿಯು, ಅಂತಿಮವಾಗಿ, ಬಹಳ ಹಿಂದಿನಿಂದಲೂ ಬಾಕಿ ಉಳಿದಿರುವ ಭಾರತೀಯ ರಾಷ್ಟ್ರೀಯ ರಂಗಭೂಮಿಯ ಭರವಸೆಯನ್ನು ಫಲಪ್ರದವಾಗಿಸಿತು ಎಂಬ ವ್ಯಾಪಕ ನಂಬಿಕೆ ಇತ್ತು. ವೇಗವಾಗಿ ಕೈಗಾರಿಕೀಕರಣಗೊಳ್ಳುತ್ತಿರುವ ಭಾರತದ ಸಮಸ್ಯೆಗಳು ಮತ್ತು ಸಮಸ್ಯೆಗಳಿಂದ ಹಾಗೂ ಜಾನಪದ ಪ್ರಕಾರಗಳಿಂದ ಹೊಸ ವಾಸ್ತವಿಕತೆಯ ಹುಟ್ಟು ಸಂಭವಿಸಿತು. ತಮ್ಮದೇ ಆದ ಸಾಂಸ್ಕೃತಿಕ-ಭಾಷಾ ಕೇಂದ್ರಗಳಲ್ಲಿ ಹೆಚ್ಚು ದೊಡ್ಡ ಜಾಲದ ಭಾಗವಾಗಿದ್ದರು. ಮೇಲೆ ತಿಳಿಸಿದ ಚಲನಶೀಲತೆಯನ್ನು ಮತ್ತಷ್ಟು ವಿವರಿಸಲು. ಮತ್ತು ವೃತ್ತಿಪರ ವೃತ್ತಿಜೀವನ, ನಾಟಕಕಾರರಾಗಿ ಅವರ ಜೀವನ ಮತ್ತು ರಂಗ ನಿರ್ದೇಶಕ ಮತ್ತು ನಟನಾಗಿ ಅವರ ಪಾತ್ರ ಎಲ್ಲವೂ ಭಾರತೀಯ ರಂಗಭೂಮಿಯಲ್ಲಿ ಅವರ ಕೆಲಸದ ಶ್ರೀಮಂತ ರಚನೆಗೆ ತಮ್ಮ ನಾಟಕವು ತನ್ನ ನಾಟಕದ ವಿಷಯಕ್ಕಾಗಿ ಬರಹಗಾರನ ಹುಡುಕಾಟದ ಸುತ್ತ ಸುತ್ತುತ್ತದೆ.

ಹೀಗಾಗಿ ಈ ನಾಟಕಕ್ಕೆ ಏನು ಮಾಡಿ ಏನು ಬಂತು ಬಸ್ಯಾ ಎಂಬ ಶೀರ್ಷಿಕೆಯೊಂದಿಗೆ ನಾಟಕ ರಚನಗೊಂಡಿದೆ. ಶಾಲೆಯಿಂದ ಕಾಲೇಜಿಗೆ ಮೊದಲ ಮೂರು ಹಂತಗಳು ವೃತ್ತಿಜೀವನ ಮತ್ತು ಘಟನೆಗಳಿಲ್ಲದೆ ಕುಟುಂಬ ಜೀವನಕ್ಕೆ ಹೋಗುತ್ತವೆ. ಬದುಕಿನ ಎಲ್ಲ ಮಜಲುಗಳು ಜಾನಪದ ಶೈಲಿಯೊಂದಿಗೆ ಮೂಡಿ ಬಂದರೆ ಅವರ ಇನ್ನೊಂದು ನಾಟಕ ಅಧ್ಯಾತ್ಮಿಕತೆಯ ಅನಾವರಣಗೊಳಿಸುವ ಶಿರಸಾಷ್ಟಾಂಗ ನಾಟಕ ಗಮನಾರ್ಹವಾಗಿದ್ದು. ಸದಾ ಅಶಾಂತನಾಗಿ, ತನ್ನ ನೀರಸ ಜೀವನದಿಂದ ಹೊರಬರುವ ಮಾರ್ಗಗಳನ್ನು ಅವನು ಪ್ರೀತಿಸುವ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಿಲ್ಲ, ಏಕೆಂದರೆ ಅವಳು ಅವನ ಮೊದಲ ಸೋದರಸಂಬಂಧಿ.

ಅವನು ಇನ್ನೊಬ್ಬಳನ್ನು ಮದುವೆಯಾಗುತ್ತಾನೆ. ಬದಲಿ ಜೀವನದಿಂದ ಬರಿದಾಗಿರುವ ಬಗೆಯನ್ನು ಗಿಳಿ ಸಾಕಿ ಗಿಡಗನ ನ ಕೈಗೆ ಕೊಟ್ಟಂತೆ ಎಂಬ ಹೇಳಿಕೆ ನಾಟಕದ ತಳದಿಯಾಗಿದೆ ಎಂದು ಓದುಗರಿಗೆ ಮತ್ತು ನೋಡುಗರ ಗಮನಕ್ಕೆ ಬರುತ್ತದೆ. ಮಧ್ಯಮ ವರ್ಗದ ಜೀವನದಿಂದ ಮಾಡುವ ಪ್ರತಿಯೊಂದು ವಿರಾಮವು ತಾನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಅದೇ ಊಹಿಸಬಹುದಾದ ಮಾದ-ರಿಗೆ ಮರಳುತ್ತದೆ ಎಂದು ಅರಿತುಕೊಳ್ಳುತ್ತಾನೆ – "ನನ್ನ ಹೆಂಡತಿ ಮನೆಯನ್ನು ನೋಡಿಕೊಳ್ಳುತ್ತಾಳೆ. ಪ್ರತಿ ತಿಂಗಳು ಅವಳು ಮಂಡಿಸುವ ಬಜೆಟ್ಟಿಗೆ ನನ್ನ ವೇತನ ಸರಿ ಹೋಗುತ್ತದೆ ಎಂದು ಬದುಕುವಾಗ ಬಂದವರು ಟೀಕಿಸುವ ಬೆಳವಣಿಗೆ ಇಲ್ಲ ಎಂಬ ನುಡಿ ಅಂತಿಮವಾಗಿ ನಾಟಕಕಾರನಿಗೆ ತಾನು ನಿಜವಾಗಿಯೂ ತನ್ನ ಅನುಭವಗಳನ್ನೇ ಸಂಭಾಷಣೆಯಾಗಿಸಿದ್ದಾನೆ ಎಂದು ಒಪ್ಪಿಕೊಳ್ಳಬಹುದಾಗಿದೆ.

ವರ್ತಮಾನದ ಜೀವನದ ಸಂಯೋಜನೆಯನ್ನು ರಚಿಸಲು ಸಮಯದ ಏಕತೆಯನ್ನು ಛಿದ್ರಗೊಳಿಸಲಾಗುತ್ತದೆ. ಆಧುನಿಕ ಭಾರತೀಯ ನಾಟಕಶಾಸ್ತ್ರದಲ್ಲಿನ ನಾವೀನ್ಯತೆಗಳ ಪಟ್ಟಿಗೆ ಅವರ ಕಾವ್ಯ, ಹಾಸ್ಯ ಮತ್ತು ಭಾಷೆಯ ನವೀನತೆಯ ವ್ಯಾಪಕ ಬಳಕೆ ನೋಡುಗರ ಮನೋಭಾವದ ಮೇಲೆ ಪ್ರಭಾವ ಬೀರುತ್ತದೆ ಒಟ್ಟಿನಲ್ಲಿ ಈ ನಾಟಕವು ಜೀವನ ಮತ್ತು ಸಂಬಂಧಗಳ ಆಕಾಂಕ್ಷೆಗಳನ್ನು ಪ್ರಸ್ತುತಪಡಿಸುತ್ತದೆ. ಎಂದರೆ ತಪ್ಪಾಗಲಾರದು ಇವರ ನಾಟಕ ಕೃತಿ ರಚನೆಗೆ ವಿಶ್ವ ರಂಗಭೂಮಿ ಒಂದು ಅವಲೋಕನ ಎಂಬ ಅವರ ಸಂಶೋಧನೆಯ ಕೃತಿಯೇ ಆಕರವಾಗಿದೆ ಎನ್ನಬಹುದು.

ನಾಟಕ ಕೃತಿ ಪರಿಚಯ ಮತ್ತು ವಿಮರ್ಶೆ.



ಅಶೋಕ ಉಕ್ಕಿಸಲ

# ಪದವಿಗಿಂತ ಐಟಿಐ ಶಿಕ್ಷಣಕ್ಕೆ ಉದ್ಯೋಗ ಖಾತ್ರಿ ಹೆಚ್ಚು: ಮಳ್ಳೂರು ಶಿವಣ್ಣ

ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: "ಇಂದಿನ ದಿನಗಳಲ್ಲಿ ಕೇವಲ ಪದವಿ ಪಡೆದ ಎಲ್ಲರಿಗೂ ಉದ್ಯೋಗ ಸಿಗುತ್ತಿಲ್ಲ. ಆದರೆ ಐಟಿಐ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಮಾರುಕಟ್ಟೆಯಲ್ಲಿ ಸಾಕಷ್ಟು ಉದ್ಯೋಗದ ಅವಕಾಶಗಳಿದ್ದು, ಉದ್ಯೋಗ ಖಾತ್ರಿ ಇದೆ" ಎಂದು ಕೇಂದ್ರ ರೇಷ್ಮೆ ಮಂಡಳಿ ಸದಸ್ಯರು ಹಾಗೂ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಮಳ್ಳೂರು ಶಿವಣ್ಣ ಹೇಳಿದರು.**

ನಗರದ ಬೈಪಾಸ್ ರಸ್ತೆಯಲ್ಲಿರುವ ಜ್ಞಾನ ಜ್ಯೋತಿ ಐಟಿಐ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. "ಇಂದಿನ ದಿನಗಳಲ್ಲಿ ಪದವಿ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್ ಸೇರಿದಂತೆ ಉನ್ನತ ಶಿಕ್ಷಣ ಪಡೆದ ಅನೇಕ ಯುವಕರು ಸೂಕ್ತ ಉದ್ಯೋಗವಿಲ್ಲದೆ ಕೇವಲ 30 ರಿಂದ 35 ಸಾವಿರ ರೂಪಾಯಿಗಳ ಕಡಿಮೆ ಸಂಬಳಕ್ಕೆ ಕೆಲಸ ನಿರ್ವಹಿಸುತ್ತಿರುವುದು ಕಂಡುಬರುತ್ತಿದೆ. ಆದರೆ, ಐಟಿಐ ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಕೌಶಲ್ಯದ ಆಧಾರದ ಮೇಲೆ ಬೇಗನೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಜಾತಿ, ಧರ್ಮ ಹಾಗೂ ಇತರೆ ಮೌಢ್ಯಗಳಿಂದ ದೂರವಿದ್ದು, ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು" ಎಂದು ಅವರು ಸಲಹೆ ನೀಡಿದರು.



## ಮೊಬೈಲ್ ಗೀಳು ಬಿಟ್ಟು ಪುಸ್ತಕ ಓದಿ: ಪ್ರಾಂಶುಪಾಲೆ ಸುನೀತ

**"ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ದೂರವಿದ್ದು, ಪುಸ್ತಕಗಳತ್ತ ಹೆಚ್ಚಿನ ಗಮನ ಹರಿಸಿದರೆ ಜೀವನದಲ್ಲಿ ಉತ್ತಮ ಸ್ಥಾನಮಾನ ಗಳಿಸಬಹುದು. ಸಾಮಾನ್ಯ ಪದವಿ ಹಾಗೂ ಉನ್ನತ ಶಿಕ್ಷಣ ಪಡೆದವರಲ್ಲಿ ಇಂದು ಉದ್ಯೋಗದ ಕೊರತೆ ಹೆಚ್ಚಾಗಿ ಕಾಡುತ್ತಿದೆ. ಇದಕ್ಕೆ ಐಟಿಐ ತಾಂತ್ರಿಕ ಶಿಕ್ಷಣವು ಉತ್ತಮ ಪರಿಹಾರ ನೀಡಬಲ್ಲದು." –ಸುನೀತ, ಕಾಲೇಜು ಪ್ರಾಂಶುಪಾಲರು.**

ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿ ಎಚ್ಚರಿಕೆ ಅಗತ್ಯ : ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಮುಖರಾದ ಈಧರೆ ಪ್ರಕಾಶ್, "ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವಾಗ ಅತ್ಯಂತ ಎಚ್ಚರಿಕೆ ಮತ್ತು ತಾಳ್ಮೆ ಅಗತ್ಯವಾಗಿದೆ. ಇಲ್ಲಿನ ಸಣ್ಣ ನಿರ್ಲಕ್ಷ್ಯವೂ ಸಹ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು. ಇನ್ನು ಮೊಬೈಲ್ ಫೋನ್‌ಗಳ ಬಳಕೆ ಎಷ್ಟು ಉಪಯುಕ್ತವೋ, ಅಷ್ಟೇ ಅನಾನುಕೂಲಗಳನ್ನೂ ಹೊಂದಿವೆ. ಯುವಜನತೆ ಅದನ್ನು ಕೇವಲ ಸಕಾರಾತ್ಮಕ ಉದ್ದೇಶಗಳಿಗೆ ಮಾತ್ರ ಬಳಸಿಕೊಳ್ಳಬೇಕು" ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಪರಿಸರ ಸಂರಕ್ಷಣೆ ಮತ್ತು ಹಸಿರು ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಸಿಗಳನ್ನು ವಿತರಿಸಿ, ಭವಿಷ್ಯಕ್ಕೆ ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಕಾಲೇಜು ಸಂಸ್ಥಾಪಕ ಅಧ್ಯಕ್ಷ ಅನೀಲ್ ಕುಮಾರ್, ಗಣ್ಯರಾದ ವಿಜಯ್ ಕುಮಾರ್, ಎಸ್.ಎಂ. ರಮೇಶ್, ಲಿಯೋ ಕ್ಲಬ್ ಆಫ್ ಕಿರಣ ಅಧ್ಯಕ್ಷ ಶ್ರೀಕಾಂತ್, ಪತ್ರಕರ್ತರಾದ ರಾಮದಾಸು ಎನ್., ಮೈತ್ರಿ ಲೋಕೇಶ್ ಪಿ., ಕಾಲೇಜಿನ ಪ್ರಾಧ್ಯಾಪಕರಾದ ರವಿ ಕುಮಾರ್, ಮಧುಶ್ರೀ, ನಂದಿನಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಕಲಿ ಪ್ರಯಾಣ ದಾಖಲೆ ಹೊಂದಿದ್ದ

## ಬಾಂಗ್ಲಾದೇಶಿಯರ ಪ್ರವೇಶ ನಿರಾಕರಿಸಿದ ದಕ್ಷಿಣ ಆಫ್ರಿಕಾ

ಅ.ಶ. ಸುದ್ದಿ ಜೋಹಾನ್ಸ್

**ಜೋಹಾನ್ಸ್ ಬರ್ಗ್: ನಕಲಿ ಪ್ರಯಾಣ ದಾಖಲೆಗಳು ಮತ್ತು ವೀಸಾಗಳನ್ನು ಹೊಂದಿದ್ದು, ದಕ್ಷಿಣ ಆಫ್ರಿಕಾಕ್ಕೆ ಪ್ರವೇಶಿಸಲು ಪ್ರಯತ್ನಿಸಿದ ಒಂಬತ್ತು ಬಾಂಗ್ಲಾ ದೇಶೀಗರನ್ನು ಗಡಿ ಅಧಿಕಾರಿಗಳು ತಡೆದ ಘಟನೆ ಟ್ಯಾಂಬೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ.ದೈನಂದಿನ ತಪಾಸಣೆ ಪ್ರಕ್ರಿಯೆ ವೇಳೆ ಈ ಗುಂಪು ಹಾಜರುಪಡಿಸಿದ ದಾಖಲೆಗಳು ನಕಲಿ ಎಂದು ಕಂಡುಬಂದ ಹಿನ್ನೆಲೆಯಲ್ಲಿ ಗಡಿ ನಿರ್ವಹಣಾ ಪ್ರಾಧಿಕಾರ(ಬಿಎಂಎ)ದ ಅಧಿಕಾರಿಗಳು ಈ ಬಾಂಗ್ಲಾ ದೇಶಿಗರನ್ನು ತಡೆದರು.**



ಇದು ಒಂಬತ್ತು ಮಂದಿಯ ಗುಂಪಾಗಿದ್ದು, ಈ ಪೈಕಿ ಮೂವರು ಮಹಿಳಾ ಪ್ರಯಾಣಿಕರು ಭಾರತೀಯ ಪಾಸ್‌ಪೋರ್ಟ್‌ಗಳನ್ನು ಹಾಜರುಪಡಿಸಿದರು. ಉಳಿದ ಆರು ಪುರುಷ ಪ್ರಯಾಣಿಕರು ಬಾಂಗ್ಲಾದೇಶ ಪಾಸ್‌ಪೋರ್ಟ್‌ಗಳನ್ನು ಹಾಜರುಪಡಿಸಿದರು. ಆದರೆ ಅವು ನಕಲಿ ಎಂಬುದು ಪತ್ತೆಯಾಯಿತು. ವಲಸೆ ಅಧಿಕಾರಿಗಳು ಈ ಅಕ್ರಮ ವಲಸಿಗ ಬಾಂಗ್ಲಾದೇಶಿಗರನ್ನು ದೇಶದೊಳಗೆ ಬರಲು ಬಿಡದೆ ವಾಪಸ್ ಕಳುಹಿಸಿದ್ದಾರೆ. ಬಾಂಗ್ಲಾ ದೇಶಕ್ಕೆ ಹಿಂದಿರುಗಲು ಸೂಕ್ತ ವ್ಯವಸ್ಥೆ ಮಾಡಿದ್ದಾರೆ ಎಂದು ಬಿಎಂಎ ಕಮೀಷನರ್ ಡಾ.ಮೈಕೇಲ್ ಮಸಿಯಾಪಟೋ ತಿಳಿಸಿದ್ದಾರೆ. ಕ್ರಿಮಿನಲ್‌ಗಳ ಸಿಂಡಿಕೇಟ್‌ಗಳು ವಲಸೆ ನಿಯಂತ್ರಣದಿಂದ ನುಣುಚಿಕೊಳ್ಳಲು ಹೊಸ ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸುತ್ತಿವೆ. ಆದರೆ ಅಧಿಕಾರಿಗಳು ನಕಲಿ ದಾಖಲೆಗಳನ್ನು ಪತ್ತೆ ಮಾಡಲು ಮತ್ತು ದೇಶಕ್ಕೆ ಅಕ್ರಮ ಪ್ರವೇಶವನ್ನು ತಡೆಗಟ್ಟಲು ಸರ್ವ ಸನ್ನದ್ಧರಾಗಿದ್ದಾರೆ ಎಂದು ಮೈಕೇಲ್ ಹೇಳಿದ್ದಾರೆ. ಈ ನಕಲಿ ಪಾಸ್‌ಪೋರ್ಟ್‌ಗಳು ಮತ್ತು ವೀಸಾಗಳ ಮೂಲ ಯಾವುದು? ಈ ಪ್ರಯಾಣಿಕರು ಅಂತಾರಾಷ್ಟ್ರೀಯ ಅಪರಾಧಿ ಗುಂಪುಗಳ ಸಂಪರ್ಕ ಹೊಂದಿದ್ದಾರೆಯೇ ಎಂಬುದನ್ನು ಪತ್ತೆ ಮಾಡಲು ತನಿಖೆ ಮುಂದುವರೆದಿದೆ ಎಂದು ಅವರು ವಿವರಿಸಿದ್ದಾರೆ. ಪಶ್ಚಿಮ ಬಂಗಾಳದ ಈ ಹಿಂದಿನ ಸರ್ಕಾರ ಬಾಂಗ್ಲಾದೇಶಿ ವಲಸಿಗರಿಗೆ ಪೂರ್ವಾಪರ ಪರಿಶೀಲಿಸದೆ ಆಧಾರ್ ಕಾರ್ಡ್‌ಗಳನ್ನು ವಿವರಿಸುತ್ತಿತ್ತು ಎಂಬ ಆರೋಪ ಇಲ್ಲಿ ಉಲ್ಲೇಖನೀಯ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಗಾಂಜಾ ಮಾರಾಟ ಇಬ್ಬರ ಬಂಧನ


ಅ.ಶ. ಸುದ್ದಿ ದೇವನಹಳ್ಳಿ

**ದೇವನಹಳ್ಳಿ: ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44 ರ ಬುಳ್ಳಹಳ್ಳಿ ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿರುವ ಹೊಂಗೆ ಮರದ ಕೆಳಗಡೆ ದ್ವಿಚಕ್ರ ವಾಹನ ನಿಲ್ಲಿಸಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಬಾಲಾಜಿ (23) ಹಾಗೂ ಗಾಂಜಾ ಗಿಡ ಬೆಳೆದು ಒಣಗಿಸಿ ಬಾಲಾಜಿಗೆ ಮಾರಾಟ ಮಾಡುತ್ತಿದ್ದ ಬಾಲರಾಜ್ (53) ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.**

ಖಚಿತ ಮಾಹಿತಿ ಮೇಲೆ ಪೊಲೀಸರ ತಂಡ ಮಂಗಳವಾರ ದಾಳಿ ನಡೆಸಿದ್ದು, ಬಂಧಿತರಿಂದ ಸುಮಾರು 650 ಗ್ರಾಂ ತೂಕದ ಹಸಿ ಮತ್ತು ಒಣ ಗಾಂಜಾ ಹಾಗೂ ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ. ವಿಜಯಪುರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಲಕ್ಷ್ಮೀನಾರಾಯಣ್ ನೇತೃತ್ವದಲ್ಲಿ ಪಿಎಸ್‌ಐ ಸುನೀಲ್‌ಕುಮಾರ್, ಸಿಬ್ಬಂದಿ ಮೊಹಮ್ಮದ್ ಮುಕ್ತಿಯಾರ್, ರಾಮಾಂಜಿ, ಅಶ್ವತ್ಥರೆಡ್ಡಿ, ಪ್ರವೀಣ್, ಮಂಜುನಾಥ್ ಅವರು ದಾಳಿ ನಡೆಸಿದರು.




# ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸಕ್ಕೆ ತೆರಳಿದ ಪ್ರಧಾನಿ ಮೋದಿ



ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಫ್ರಾನ್ಸ್ ಮತ್ತು ಸ್ಲೋವಾಕಿಯಾಕ್ಕೆ ಒಂದು ವಾರದ ಭೇಟಿಗಾಗಿ ತೆರಳಿದ್ದಾರೆ, ಈ ಸಂದರ್ಭದಲ್ಲಿ ಅವರು ಜಿ7 ಶೃಂಗಸಭೆಯಲ್ಲಿ ಭಾಗವಹಿಸಿ ವಿವಿಧ ದ್ವಿಪಕ್ಷೀಯ ಮತ್ತು ಜಾಗತಿಕ ವಿಷಯಗಳ ಕುರಿತು ವಿಶ್ವ ನಾಯಕ ರೊಂದಿಗೆ ಚರ್ಚೆ ನಡೆಸಲಿದ್ದಾರೆ.**

ಭಾರತದ ಕಾರ್ಯತಂತ್ರದ ದೃಷ್ಟಿಕೋನದಲ್ಲಿ ಫ್ರಾನ್ಸ್ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ ಎಂದು ಮೋದಿ ತಮ್ಮ ನಿರ್ಗಮನ ಹೇಳಿಕೆಯಲ್ಲಿ ತಿಳಿಸಿದ್ದಾರೆ.ಆದರೆ 1993 ರಲ್ಲಿ ದೇಶದ ಸ್ವಾತಂತ್ರ್ಯದ ನಂತರ ಭಾರತೀಯ ಪ್ರಧಾನಿಯೊಬ್ಬರು ಮಾಡಿದ ಮೊದಲ ಸ್ಲೋವಾಕಿಯಾ ಭೇಟಿಯು ಐತಿಹಾಸಿಕ ಮೈಲಿಗಲ್ಲನ್ನು ಸೂಚಿಸುತ್ತದೆ ಮತ್ತು ದ್ವಿಪಕ್ಷೀಯ ಸಂಬಂಧಗಳಲ್ಲಿ ಬೆಳೆಯುತ್ತಿರುವ ಆವೇಗವನ್ನು ನಿರ್ಮಿಸುತ್ತದೆ. ಈ ವರ್ಷದ ಆರಂಭದಲ್ಲಿ ಅಧ್ಯಕ್ಷ ಮ್ಯಾಕ್ರನ್ ಭಾರತಕ್ಕೆ ಭೇಟಿ ನೀಡಿದರು, ಮತ್ತು ನಾವು ನಮ್ಮ ಸಂಬಂಧವನ್ನು ವಿಶೇಷ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಿದ್ದೇವೆ ಎಂದು ಮೋದಿ ಹೇಳಿದರು.

ನಾನು ಅಧ್ಯಕ್ಷ ಮ್ಯಾಕ್ರನ್‌ರನ್ನು ಭೇಟಿಯಾದಾಗ, ಫೆಬ್ರವರಿಯಿಂದ ಸಾಧಿಸಿದ ಪ್ರಗತಿಯನ್ನು ನಾವು ಪರಿಶೀಲಿಸುತ್ತೇವೆ ಮತ್ತು ನಮ್ಮ ಸಹಕಾರದಲ್ಲಿ ಮುಂದಿನ ಹಂತಗಳನ್ನು ಪಟ್ಟಿ ಮಾಡುತ್ತೇವೆ. ಪರಸ್ಪರ ಆಸಕ್ತಿಯ ಜಾಗತಿಕ ಸಮಸ್ಯೆಗಳ ಕುರಿತು ನಮ್ಮ ಚರ್ಚೆಗಳನ್ನು ಸಹ ನಾನು ಎದುರು ನೋಡುತ್ತಿದ್ದೇನೆ ಎಂದು ಅವರು ಹೇಳಿದರು. ಸ್ಲೋವಾಕ್ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಮತ್ತು ಬ್ರಾಟಿಸ್ಲಾವಾದಲ್ಲಿ ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೆ ಚರ್ಚೆಗಳನ್ನು ನಡೆಸಲು ಎದುರು ನೋಡುತ್ತಿದ್ದೇನೆ ಎಂದು ಮೋದಿ ಹೇಳಿದರು.

ಫ್ರಾನ್?ಸನ ಎವಿಯನ್‌ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಭಾರತದ ಭಾಗವಹಿಸುವಿಕೆಯು ದೇಶದ ಪಾಲುದಾರರು ದೇಶದ ಮೇಲೆ ಇಟ್ಟಿರುವ ವಿಶ್ವಾಸ ಮತ್ತು ಅದರ ಬೆಳೆಯುತ್ತಿರುವ ಜಾಗತಿಕ ಪ್ರೊಫೈಲ್ ಅನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ಹೇಳಿದರು. ಇದು ಭಾರತವನ್ನು ಆಹ್ವಾನಿಸಲಾಗುತ್ತಿರುವ ಎಂಟನೇ ಸತತ ಜಿ7 ಶೃಂಗಸಭೆಯಾಗಿದೆ. ಜಿ7 ನಲ್ಲಿ, ಭಾರತವು ತನ್ನ ಪರವಾಗಿ ಮಾತನಾಡುವುದಲ್ಲದೆ, ಜಾಗತಿಕ ದಕ್ಷಿಣದ ಆಕಾಂಕ್ಷೆಗಳಿಗೆ ಧ್ವನಿ ನೀಡುತ್ತದೆ ಎಂದು ಅವರು ಹೇಳಿದರು.

# ತ್ಯಾಜ್ಯ ವಿಲೇವಾರಿ ಯೋಜನೆಯಲ್ಲಿ 39,000 ಕೋಟಿ ರೂ. ಅಕ್ರಮ ಆರೋಪ ಆಧಾರರಹಿತ : ಎಂ. ಲಕ್ಷ್ಮಣ್

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನಗರದ ಘನತ್ಯಾಜ್ಯ ವಿಲೇವಾರಿ ಯೋಜನೆಗೆ ಸಂಬಂಧಿಸಿದಂತೆ ವಿರೋಧ ಪಕ್ಷದ ಬಿಜೆಪಿ ನಾಯಕ ಆರ್.ಅಶೋಕ್‌ರವರು ಮಾಡುತ್ತಿರುವ 39,000 ಕೋಟಿ ಅಕ್ರಮ ಹಾಗೂ ಲೂಟಿ ಆರೋಪಗಳು ಸಂಪೂರ್ಣ ಆಧಾರರಹಿತವಾಗಿದ್ದು, ಜನರನ್ನು ದಾರಿ ತಪ್ಪಿಸುವ ಪ್ರಯತ್ನವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಆರೋಪಿಸಿದರು.**

ಘನತ್ಯಾಜ್ಯ ವಿಲೇವಾರಿ ಯೋಜನೆಗೆ 30 ವರ್ಷಗಳ ಅವಧಿಯ ಗುತ್ತಿಗೆ ನೀಡಿರುವುದು ಮೂಲಸೌಕರ್ಯ ಅಭಿವೃದ್ಧಿ, ಸಂಸ್ಕರಣಾ ಘಟಕಗಳ ನಿರ್ಮಾಣ ಹಾಗೂ ದೀರ್ಘಾವಧಿಯ ಹೂಡಿಕೆಯನ್ನು ಗಮನದಲ್ಲಿಟ್ಟುಕೊಂಡು ಕಸ ಸಂಗ್ರಹಣೆ, ಸಾಗಣೆ ಹಾಗೂ ವೈಜ್ಞಾನಿಕ ವಿಲೇವಾರಿಯ ಜವಾಬ್ದಾರಿಯನ್ನು ಗುತ್ತಿಗೆ ಪಡೆಯುವ ಸಂಸ್ಥೆ ನಿರ್ವಹಿಸಲಿದೆ.



ಪೌರಕಾರ್ಮಿಕರ ವೇತನವನ್ನು ಬಿಬಿಎಂಪಿಯೇ ಪ್ರತ್ಯೇಕವಾಗಿ ಭರಿಸುತ್ತದೆ ಎಂದು ಸ್ಪಷ್ಟಪಡಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿ ಪ್ರತಿದಿನ ಸುಮಾರು 6,000 ಟನ್ ಕಸ ಉತ್ಪತ್ತಿಯಾಗುತ್ತಿದ್ದು, ಅದನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿದ್ಯುತ್ ಉತ್ಪಾದನೆ ಹಾಗೂ ಸಂಪನೂಲ ಮರುಬಳಕೆಯ ಉದ್ದೇಶದಿಂದ ಯೋಜನೆ ರೂಪಿಸಲಾಗಿದೆ. ಕೇಂದ್ರ ಸರ್ಕಾರದ ನಿಯಮಾವಳಿಗಳು ಹಾಗೂ ಒಪ್ಪಂದದ ಷರತ್ತುಗಳ ಅನ್ವಯವೇ ಟೆಂಡರ್ ಪ್ರಕ್ರಿಯೆ ನಡೆದಿದೆ ಎಂದು ಅವರು ತಿಳಿಸಿದರು.

ಯೋಜನೆಯ ವೆಚ್ಚದ ಬಗ್ಗೆ ಮಾತನಾಡಿದ ಅವರು, ಇದೀಗ ಚಾಲ್ತಿಯಲ್ಲಿರುವ ವ್ಯವಸ್ಥೆಯಲ್ಲಿ ಪ್ರತಿ ಟನ್ ಕಸ ನಿರ್ವಹಣೆಗೆ ಹೆಚ್ಚು ವೆಚ್ಚವಾಗುತ್ತಿದೆ. ಹೊಸ ವ್ಯವಸ್ಥೆಯಲ್ಲಿ ವೆಚ್ಚ ಕಡಿಮೆಯಾಗಲಿದ್ದು, ದೀರ್ಘಾವಧಿಯಲ್ಲಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ಉಳಿತಾಯವಾಗಲಿದೆ. ಇದರಲ್ಲಿ ಯಾವುದೇ ರೀತಿಯ ಲೂಟಿ ನಡೆದಿಲ್ಲ, ಬದಲಿಗೆ ಸಾರ್ವಜನಿಕ ಹಣದ ಉಳಿತಾಯಕ್ಕೆ ಆದ್ಯತೆ ನೀಡಲಾಗಿದೆ ಎಂದರು. ಟೆಂಡರ್ ಪ್ರಕ್ರಿಯೆ ಕುರಿತು ವಿವರಿಸಿದ ಅವರು, ಆರಂಭಿಕ ಹಂತಗಳಲ್ಲಿ ಜಾಗತಿಕ ಟೆಂಡರ್‌ಗೆ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ನಿಯಮಾನುಸಾರ ಪರಿಷ್ಕರಣೆಗಳನ್ನು ಮಾಡಿ ಮರು ಟೆಂಡರ್ ಕರೆಯಲಾಗಿತ್ತು. ಅಂತಿಮವಾಗಿ ಸ್ಪರ್ಧಾತ್ಮಕ ಪ್ರಕ್ರಿಯೆಯ ಮೂಲಕ ಸಂಸ್ಥೆ ಆಯ್ಕೆಯಾಗಿದೆ ಎಂದು ಹೇಳಿದರು.

ಆಧಾರವಿಲ್ಲದೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಆರೋಪ ಮಾಡುವುದು ಸರಿಯಲ್ಲ. ಬಿಜೆಪಿ ನಾಯಕರ ಬಳಿ ದಾಖಲೆಗಳಿದ್ದರೆ ತನಿಖಾ ಸಂಸ್ಥೆಗಳಿಗೆ ಸಲ್ಲಿಸಲಿ. ಇಡಿ, ಐಟಿ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿವೆ. ಅಕ್ರಮ ನಡೆದಿದ್ದರೆ ತನಿಖೆ ನಡೆಸಿ ಸತ್ಯವನ್ನು ಹೊರತರಲಿಟಟಿ ಎಂದು ಸವಾಲು ಹಾಕಿದರು. 2022ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದಂಡ ವಿಧಿಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಆ ಅವಧಿಯ ಜವಾಬ್ದಾರಿಯ ಕುರಿತು ಉತ್ತರ ನೀಡುವ ಬದಲು ಪ್ರಸ್ತುತ ಸರ್ಕಾರದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಅವರು ಟೀಕಿಸಿದರು.

# ಸಂಚಾರ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಭಾರತ ಸಜ್ಜು, ಮುಂದಿನ ವರ್ಷ ಬುಲೆಟ್ ಟ್ರೈನ್ ಸೇವೆ ಆರಂಭ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಭಾರತದ ಮೊದಲ ಬುಲೆಟ್ ರೈಲು ಯೋಜನೆ ಇದೀಗ ಸಂಪೂರ್ಣ ಆಗುವ ಹಂತಕ್ಕೆ ತಲುಪಿದ್ದು, 2027ರ ಆಗಸ್ಟ್ 15ರಂದು ಮೊದಲ ಹಂತದ ಸೇವೆ ಆರಂಭವಾಗುವ ನಿರೀಕ್ಷೆಯಿದೆ. ಜಪಾನ್‌ನ ಪ್ರಸಿದ್ಧ ಶಿಂಕನ್ಸೆನ್ ತಂತ್ರಜ್ಞಾನವನ್ನು ಆಧರಿಸಿದ ಮುಂಬೈ–ಅಹಮದಾಬಾದ್ ಹೈ–ಸ್ಪೀಡ್ ರೈಲು ಕಾರಿಡಾರ್ ದೇಶದ ರೈಲು ಸಂಚಾರ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಬರೆಯಲಿದೆ.**

ಕೇಂದ್ರ ರೈಲ್ವೆ ಇಲಾಖೆ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರಕಾರ, ಸ್ವಾತಂತ್ರ್ಯ ದಿನಾಚರಣೆಯಂದು ಮೊದಲ ಹಂತದ ಸೇವೆಗೆ ಚಾಲನೆ ನೀಡಲಾಗುತ್ತದೆ. ಒಟ್ಟು 508 ಕಿಲೋಮೀಟರ್ ಉದ್ದದ ಈ ಮಾರ್ಗವು ಭಾರತದ ಮೊದಲ ಸಮರ್ಪಿತ ಹೈ–ಸ್ಪೀಡ್ ರೈಲು ಕಾರಿಡಾರ್ ಆಗಿದೆ.ಈ ಯೋಜನೆ ಸಂಪೂರ್ಣ ಕಾರ್ಯಾರಂಭ ಮಾಡಿದ ಬಳಿಕ ಮುಂಬೈ ಮತ್ತು ಅಹಮದಾಬಾದ್ ನಡುವಿನ ಪ್ರಯಾಣವನ್ನು ಎರಡು ಗಂಟೆಗಳೊಳಗೆ ಪೂರ್ಣಗೊಳಿಸಲು ಸಾಧ್ಯವಾಗಲಿದೆ.



ಪ್ರಸ್ತುತ ರೈಲು ಪ್ರಯಾಣಕ್ಕೆ ಬೇಕಾಗುವ ಸಮಯಕ್ಕೆ ಹೋಲಿಸಿದರೆ ಇದರಿಂದ ದೊಡ್ಡ ಮಟ್ಟದಲ್ಲಿ ಸಮಯ ಉಳಿತಾಯ ಆಗಲಿದೆ. ಯೋಜನೆಯನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುತ್ತಿದ್ದು, 2029ರ ಅಂತ್ಯದೊಳಗೆ ಸಂಪೂರ್ಣ ಕಾರಿಡಾರ್ ಕಾರ್ಯರೂಪಕ್ಕೆ ಬರುವ ಗುರಿ ಹೊಂದಲಾಗಿದೆ. ಈ ಹೈ–ಸ್ಪೀಡ್ ರೈಲು ಮಾರ್ಗದಲ್ಲಿ ಒಟ್ಟು 12 ನಿಲ್ದಾಣಗಳು ಇರಲಿವೆ. ಮುಂಬೈ, ಥಾಣೆ, ವಿರಾರ್, ಬೋಯ್ಸರ್, ವಾಪಿ, ಬಿಲಿಮೋರಾ, ಸೂರತ್, ಭರೂಚ್, ವಡೋದರಾ, ಆನಂದ್, ಅಹಮದಾಬಾದ್ ಮತ್ತು ಸಬರಮತಿ ನಿಲ್ದಾಣಗಳು ಈ ಮಾರ್ಗದಲ್ಲಿ ಸೇರಿವೆ. ಯೋಜನೆಯ ಮೊದಲ ಹಂತದಲ್ಲಿ ಭಾರತದಲ್ಲೇ ನಿರ್ಮಾಣವಾಗುತ್ತಿರುವ ಬಿಇಎಂಎಲ್ ಕಂಪನಿಯ B28 ರೈಲುಸೆಟ್ಗಳನ್ನು ಬಳಸುವ ಯೋಜನೆ ಇದೆ. ಇದು ದೇಶೀಯ ರೈಲು ತಂತ್ರಜ್ಞಾನ ಕ್ಷೇತ್ರಕ್ಕೆ ಮಹತ್ವದ ಮೈಲುಗಲ್ಲಾಗಲಿದೆ.

ಜಪಾನ್ನ ಶಿಂಕನ್ಸೆನ್ ತಂತ್ರಜ್ಞಾನವು ವಿಶ್ವದ ಅತ್ಯಂತ ಸುರಕ್ಷಿತ, ವೇಗದ ಮತ್ತು ಸಮಯಪಾಲನೆಗೆ ಹೆಸರುವಾಸಿಯಾದ ರೈಲು ವ್ಯವಸ್ಥೆಗಳಲ್ಲಿ ಒಂದಾಗಿದೆ. ಇದೇ ತಂತ್ರಜ್ಞಾನವನ್ನು ಭಾರತದಲ್ಲಿ ಅಳವಡಿಸುವ ಮೂಲಕ ಹೈ–ಸ್ಪೀಡ್ ರೈಲು ಸೇವೆಯನ್ನು ಮತ್ತಷ್ಟು ವಿಶ್ವಾಸಾರ್ಹವಾಗಿಸಲು ಯೋಜಿಸಲಾಗಿದೆ. ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಯೋಜನೆ ಪೂರ್ಣಗೊಂಡರೆ, ದೇಶದಲ್ಲಿ ವೇಗದ ರೈಲು ಸಂಚಾರಕ್ಕೆ ಹೊಸ ದಿಕ್ಕು ಸಿಗಲಿದ್ದು, ಮುಂದಿನ ದಿನಗಳಲ್ಲಿ ಇತರ ಪ್ರಮುಖ ನಗರಗಳ ನಡುವೆಯೂ ಇಂತಹ ಹೈ–ಸ್ಪೀಡ್ ಕಾರಿಡಾರ್ಗಳ ಅಭಿವೃದ್ಧಿಗೆ ದಾರಿ ತೆರೆದುಕೊಳ್ಳಲಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳನ್ನು ಸಂಪರ್ಕಿಸುವ ಈ ಮಹತ್ವಾಕಾಂಕ್ಷಿ ಬುಲೆಟ್ ರೈಲು ಯೋಜನೆ ದೇಶದ ಹೈ–ಸ್ಪೀಡ್ ರೈಲು ಜಾಲ ವಿಸ್ತರಣೆಯಲ್ಲಿ ಪ್ರಮುಖ ಮೈಲಿಗಲ್ಲಾಗಲಿದೆ.

ಈಗಾಗಲೇ ಮುಂಬೈ–ಅಹಮದಾಬಾದ್ ಹೈ–ಸ್ಪೀಡ್ ರೈಲು ಕಾರಿಡಾರ್ ಕಾಮಗಾರಿ ವೇಗವಾಗಿ ಸಾಗುತ್ತಿದ್ದು, 2027ರ ಆಗಸ್ಟ್ 15ರಂದು ಮೊದಲ ಹಂತದ ಸೇವೆ ಆರಂಭಿಸುವ ಗುರಿ ಹೊಂದಲಾಗಿದೆ. ಇದೇ ಮಾದರಿಯಲ್ಲಿ ರೂಪುಗೊಳ್ಳುತ್ತಿರುವ ಮುಂಬೈ–ಹೈದರಾಬಾದ್ ಬುಲೆಟ್ ರೈಲು ಯೋಜನೆ ಜಾರಿಯಾದರೆ, ಮೂರು ರಾಜ್ಯಗಳ ನಡುವಿನ ಸಂಪರ್ಕ ಮತ್ತಷ್ಟು ಸುಗಮವಾಗಲಿದ್ದು, ಪ್ರಯಾಣದ ಸಮಯದಲ್ಲಿ ಭಾರೀ ಉಳಿತಾಯವಾಗುವ ನಿರೀಕ್ಷೆಯಿದೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka